ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಡಿಸೆಂಬರ್ 13, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 211 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



**ಛಟ್ಟಿ ಅಮಾವಾಸ್ಯೆ** ದಾವಣಗೆರೆ ದೊಡ್ಡಪೇಟೆಯ ಗುಡ್ಡಾಪುರದ ಶ್ರೀ ದಾನಮ್ಮ ದೇವಿ ಛಟ್ಟಿ ಅಮಾವಾಸ್ಯೆ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಶ್ರೀ ದಾನಮ್ಮ ದೇವಿಗೆ ಅಭಿಷೇಕ ಪೂಜೆ ನಂತರ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ಇದೇ ವೇಳೆ ಮದುವೆ ಆಗುವವರಿಗೆ ಕಂಕಣ ದಂಡಿ ಹಾಕಿಸುವ ಕಾರ್ಯಕ್ರಮ ನೆರವೇರಿತು. ಗುಡ್ಡಾಪುರದ ಶ್ರೀ ದಾನಮ್ಮ ದೇವಿ ಅಲಂಕಾರ (ಒಳ ಚಿತ್ರ)

# ಜಾತಿ ಗಣತಿ ವಿರೋಧಿಸಿಲ್ಲ

## ರಾಜ್ಯಸಭೆಯಲ್ಲಿ ಖರ್ಗೆ ತರಾಟೆಯ ನಂತರ ಡಿಕೆ ಶಿವಕುಮಾರ್ ಸ್ಪಷ್ಟನೆ

ಬೆಂಗಳೂರು, ಡಿ. 12 – ನಾನು ಜಾತಿ ಗಣತಿ ವಿರೋಧಿಸಿಲ್ಲ ಎಂದು ಸ್ಪಷ್ಟಪಡಿಸಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಾತಿ ಗಣತಿ ವೈಜ್ಞಾನಿಕವಾಗಿ ಹಾಗೂ ವ್ಯವಸ್ಥಿತವಾಗಿ ನಡೆಯಬೇಕು ಎಂದಷ್ಟೇ ಹೇಳಿದ್ದೇನೆ ಎಂದಿದ್ದಾರೆ.

ರಾಜ್ಯಸಭೆಯಲ್ಲಿ ಚರ್ಚೆ ನಡೆಯುವಾಗ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಹಾಗೂ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಶಿವಕುಮಾರ್ ನಿಲುವಿಗೆ ಆಕ್ಷೇಪ ವ್ಯಕ್ತಪಡಿಸಿದ್ದರು. 'ಎಲ್ಲಾ ಮೇಲ್ಜಾತಿಯವರು ಈ ವಿಷಯದಲ್ಲಿ ಒಂದೇ' ಎಂದು ಹೇಳಿದ್ದರು.

ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯಗಳವರು ಹೆಚ್.ಕಾಂತರಾಜ್ ಆಯೋಗದ ಜಾತಿ ಸಮೀಕ್ಷೆ ವರದಿಯನ್ನು ವಿರೋಧಿಸುತ್ತಿದ್ದಾರೆ. ಈ ವಿರೋಧಕ್ಕೆ ಶಿವಕುಮಾರ್ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಸಹ ದನಿ ಗೂಡಿಸಿದ್ದಾರೆ.



ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ಅವರು ಜಾತಿ ಗಣತಿ ಕುರಿತು ಮಾತನಾಡುತ್ತಾ, ಕಾಂಗ್ರೆಸ್ ಪಕ್ಷ ಜಾತಿ ಗಣತಿ ಮಾಡಬೇಕೆಂದು ಹೇಳುತ್ತಿದೆ. ಆದರೆ, ಕರ್ನಾಟಕದಲ್ಲಿ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಜಾತಿ ಸಮೀಕ್ಷೆ ಬಹಿರಂಗಕ್ಕೆ ವಿರೋಧಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ್ದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಉಪ ಮುಖ್ಯಮಂತ್ರಿ ಮಾತ್ರವಲ್ಲದೆ, ಕಾಂಗ್ರೆಸ್‌ನ ಅನೇಕ ಶಾಸಕರು ಹಾಗೂ ವೀರಶೈವ ಮಹಾಸಭಾದ ನಾಯಕರು ಕೂಡ ಜಾತಿ ಗಣತಿ ವರದಿ ಬಹಿರಂಗಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದಿದ್ದರು.

ಆಗ ಕಿಡಿ ಕಾರಿದ್ದ ಖರ್ಗೆ, ಶಿವಕುಮಾರ್ ಮತ್ತು ಬಿಜೆಪಿ ನಾಯಕರು ಜಾತಿ ಗಣತಿ ವರದಿ ವಿರುದ್ಧವಾಗಿದ್ದಾರೆ. ಅವರು ಕೂಡ ವಿರೋಧಿಸುತ್ತಿದ್ದಾರೆ, ನೀವು ಕೂಡ ವಿರೋಧಿಸುತ್ತಿದ್ದೀರಿ. ನೀವು ಈ ವಿಷಯದಲ್ಲಿ ಒಂದೇ ಆಗಿದ್ದೀರಿ. ಮೇಲ್ಜಾತಿಯ ಜನರು ಒಳಗೊಳಗೆ ಒಂದುಗೂಡಿರುತ್ತಾರೆ ಎಂದು ಕಿಡಿಕಾರಿದ್ದರು.

ಖರ್ಗೆ ಹೇಳಿಕೆಯ ನಂತರ ಪ್ರತಿಕ್ರಿಯಿಸಿರುವ ಶಿವಕುಮಾರ್, 2015ರಲ್ಲಿ ಆಗಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾತಿ ಗಣತಿ ನಡೆಸಿದಾಗ ಅವರು ನನ್ನ ಮನೆಯ ವಿವರ ಪಡೆದಿರಲಿಲ್ಲ. ಎಷ್ಟು ಶಾಸಕರಿದ್ದಾರೆ ಎಂಬುದನ್ನೂ ಪರಿಶೀಲಿಸಿರಲಿಲ್ಲ ಎಂದರು. (3ನೇ ಪುಟಕ್ಕೆ)

# ಹುಕ್ಕಾ ಬಾರ್‌ಗಳಿಗೆ ಕಡಿವಾಣ: ಪರಮೇಶ್ವರ್

**ಆರೋಗ್ಯ, ಆಹಾರ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾನೂನು ರಚನೆ**

ಬೆಳಗಾವಿ, ಡಿ. 12 - ಯುವ ಪೀಳಿಗೆಯ ದಾರಿ ತಪ್ಪಿಸುತ್ತಿರುವ ಹುಕ್ಕಾ ಬಾರ್‌ಗೆ ಕಡಿವಾಣ ಹಾಕುವುದಾಗಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸಿ.ಕೆ. ರಾಮಮೂರ್ತಿ ಹಾಗೂ ಸುರೇಶ್ ಕುಮಾರ್ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಆರೋಗ್ಯ ಹಾಗೂ ಆಹಾರ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಹುಕ್ಕಾ ಬಾರ್ ನಿಯಂತ್ರಣಕ್ಕೆ ಕಾನೂನು ರೂಪಿಸುವುದಾಗಿ ಹೇಳಿದರು.

ನಮ್ಮ ಸರ್ಕಾರ ಡ್ರಗ್ಸ್ ಹಾಗೂ ಮಾದಕ ಪದಾರ್ಥಗಳ ಮಾರಾಟವನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ, ನಾವು ಹುಕ್ಕಾ ಬಾರ್ ನಡೆಸಲು ಅವಕಾಶವನ್ನೂ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಪರವಾನಗಿ ಪಡೆದು ವ್ಯಾಪಾರಿಗಳು ಹುಕ್ಕಾ ಬಾರ್ ನಡೆಸುತ್ತಿದ್ದಾರೆ. ನ್ಯಾಯಾಲಯವೂ ಕೂಡ ಹುಕ್ಕಾ ಸೇದುವವರಿಗೆ ಪ್ರತ್ಯೇಕ ಸ್ಥಳ ನಿಗದಿಪಡಿಸಿ ಎಂದು ಹೇಳಿದೆ.

ಆದರೆ, ವ್ಯಾಪಾರಿಗಳು ಇದನ್ನು ದುರುಪಯೋಗ ಮಾಡಿಕೊಂಡು ಹುಕ್ಕಾ ಬಾರ್ ಹೆಸರಿನಲ್ಲಿ ಮಾದಕ ದಂಧೆ ನಡೆಸುತ್ತಿವೆ. ಇದಕ್ಕೆ ಕಡಿವಾಣ ಹಾಕೇ ಹಾಕುತ್ತೇವೆ ಎಂದರು.

ಶಶಿಕಲಾ ಜೊಲ್ಲೆ ಅವರ ಮತ್ತೊಂದು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಗೃಹ ರಕ್ಷಕರಿಗೆ ಬೇರೆ ರಾಜ್ಯಗಳಲ್ಲಿ ನೀಡುತ್ತಿರುವ ಭತ್ಯೆಯನ್ನು ಅವಲೋಕಿಸಿ ಶೀಘ್ರವೇ ಭತ್ಯೆ ಪರಿಷ್ಕರಿಸುವುದಾಗಿ ತಿಳಿಸಿದರು.

ವಂಟಮೂರಿ ಗ್ರಾಮದಲ್ಲಿ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ ಸಚಿವರು, ಈಗಾಗಲೇ ಏಳು ಮಂದಿಯನ್ನು ಬಂಧಿಸಲಾಗಿದೆ. ಪ್ರೀತಿಸಿ ಗ್ರಾಮ ಬಿಟ್ಟು ಹೋದ ಪ್ರೇಮಿಗಳನ್ನು ಹುಡುಕಿ ಸರ್ಕಾರದಿಂದ ಸೂಕ್ತ ರಕ್ಷಣೆ ನೀಡುವುದಾಗಿಯೂ ಭರವಸೆ ನೀಡಿದರು.

ಸಮಾಜದಲ್ಲಿ ಪ್ರೀತಿಸಿ ಮದುವೆ ಆಗುವುದಕ್ಕೆ ಇಂದಿಗೂ ವಿರೋಧ ಕಂಡುಬರುತ್ತದೆ. ಕೆಲವು ಪ್ರಕರಣಗಳಲ್ಲಿ ಪೋಷಕರು ಒಪ್ಪಿ ಮದುವೆ ಮಾಡಿಸುತ್ತಾರೆ. ಆದರೆ ಇದಕ್ಕೆ ವಿರೋಧವೇ ಹೆಚ್ಚು ಎಂದರು.

## ಮೈಸೂರು-ಬೆಂಗಳೂರು ನಡುವೆ 10 ನಿಮಿಷಕ್ಕೊಂದು ರೈಲು

ಬೆಂಗಳೂರು, ಡಿ. 12 - ವಾಣಿಜ್ಯ ನಗರವಾಗಿ ಪರಿವರ್ತನೆ ಆಗುತ್ತಿರುವ ಸಾಂಸ್ಕೃತಿಕ ನಗರಿ ಮೈಸೂರು ಹಾಗೂ ರಾಜಧಾನಿ ಬೆಂಗಳೂರು ನಡುವೆ ಇನ್ನು ಮುಂದೆ ಪ್ರತಿ 10 ನಿಮಿಷಕ್ಕೆ ಒಂದು ರೈಲು ಓಡಿಸಲು ಕೇಂದ್ರ ರೈಲ್ವೆ ಮಂಡಳಿ ಮಹತ್ವದ ತೀರ್ಮಾನ ಕೈಗೊಂಡಿದೆ.

ಮೆಟ್ರೊ ಮಾದರಿ ಈ ಉಭಯ ನಗರಗಳ ನಡುವೆ ಒಂದರ ಹಿಂದೆ ಒಂದು ರೈಲು ಓಡಿಸಲು ನಿರ್ಧರಿಸಿದೆ.

ಇದಕ್ಕಾಗಿ ಉಭಯ ನಗರಗಳ ನಡುವೆ ಇರುವ ಜೋಡಿ ಮಾರ್ಗವನ್ನು ನಾಲ್ಕು ಮಾರ್ಗಗಳಾಗಿ ಪರಿವರ್ತಿಸಲು ಮಂಡಳಿ ತೀರ್ಮಾನಿಸಿದೆ. ರೈಲು ಮಾರ್ಗ ಅಭಿವೃದ್ಧಿ ಪಡಿಸಲು ಮಂಡಳಿ ತೀರ್ಮಾನ (5ನೇ ಪುಟಕ್ಕೆ)

## ಮೂರು ಅಪರಾಧ ಮಸೂದೆ ವಾಪಾಸ್ ಹೊಸ ಮಸೂದೆಗಳನ್ನು ಮಂಡಿಸಿದ ಕೇಂದ್ರ

ನವದೆಹಲಿ, ಡಿ. 12- ಅಪರಾಧ ಕಾಯ್ದೆಗಳಿಗೆ ಸಂಬಂಧಿಸಿದ ಮೂರು ಮಸೂದೆಗಳನ್ನು ಕೇಂದ್ರ ಸರ್ಕಾರ ವಾಪಸ್ ಪಡೆದಿದ್ದು, ಹೊಸ ಕರಡು ಮಸೂದೆಗಳನ್ನು ಮಂಡಿಸಿದೆ.

ಹಳೆಯ ಮಸೂದೆಗಳಿಗೆ ಸದನದ ಸಮಿತಿ ಹಲವಾರು ಶಿಫಾರಸ್ಸುಗಳನ್ನು ಮಾಡಿತ್ತು. ಈ ಶಿಫಾರಸ್ಸುಗಳಿಗೆ ತಿದ್ದುಪಡಿ ತರುವ ಬದಲು, ಹೊಸ ಮಸೂದೆಗಳನ್ನು ಮಂಡಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಲೋಕಸಭೆಗೆ ತಿಳಿಸಿದ್ದಾರೆ.

ಗುರುವಾರ ಮಸೂದೆಗಳ ಕುರಿತು ಚರ್ಚೆ ನಡೆಯಲಿದೆ ಹಾಗೂ ಶುಕ್ರವಾರ ಮಸೂದೆಗಳನ್ನು ಮತಕ್ಕೆ ಹಾಕಲಾಗುವುದು ಎಂದು ಅಮಿತ್ ಷಾ ತಿಳಿಸಿದ್ದಾರೆ.

ಮಸೂದೆಗಳ ಅಧ್ಯಯನ ಮಾಡಲು ಸಮಯ ಬೇಕು ಎಂದು ಪ್ರತಿಪಕ್ಷಗಳ ಸದಸ್ಯರು ತಿಳಿಸಿದರು. ಮಸೂದೆ ಮಂಡನೆಯಾದ ನಂತರ ಅಧ್ಯಯನಕ್ಕೆ 48 ಗಂಟೆಗಳ ಸಮಯ ಸಿಗಲಿದೆ ಎಂದು ಅಮಿತ್ ಷಾ ಹೇಳಿದ್ದಾರೆ. ಈ (4ನೇ ಪುಟಕ್ಕೆ)

## 2040ರಲ್ಲಿ ಚಂದ್ರನ ಮೇಲೆ ಭಾರತದ ಗಗನಯಾತ್ರಿ

ತಿರುವನಂತಪುರಂ, ಡಿ. 12 – 2040ರ ವೇಳೆಗೆ ಮೊದಲ ಭಾರತೀಯ ಗಗನಯಾತ್ರಿಯನ್ನು ಚಂದ್ರನ ಮೇಲೆ ಇಳಿಸಲಾಗುವುದು ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋದ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

ಪ್ರಸಕ್ತ ಇಸ್ರೋ ಗಗನಯಾನದ ಸಿದ್ಧತೆಯಲ್ಲಿದೆ. ಆ ಮೂಲಕ ಗಗನಯಾತ್ರಿಗಳನ್ನು ಭೂಮಿಯ ಕೆಳ ಕಕ್ಷೆಗೆ ರವಾನಿಸಿ ಸುರಕ್ಷಿತವಾಗಿ ವಾಪಸ್ ಕರೆ ತರಲಾಗುವುದು.

2035ರ ವೇಳೆಗೆ ಭಾರತೀಯ ಅಂತರಿಕ್ಷ ಕೇಂದ್ರ ಹೊಂದುವ ಗುರಿ ಇದೆ. ಗ್ರಹಗಳ ಸಂಶೋಧನೆಗೆ ಈ ಕ್ರಮ ನೆರವಾಗಲಿದೆ ಎಂದೂ ಅವರು ಹೇಳಿದ್ದಾರೆ.

## ಈರುಳ್ಳಿ ರಫ್ತು ನಿಷೇಧಕ್ಕೆ ಕೇಂದ್ರದ ಸಮರ್ಥನೆ

ನವದೆಹಲಿ, ಡಿ. 12 – ಈರುಳ್ಳಿ ರಫ್ತು ನಿಷೇಧವನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಭಾರತೀಯ ಗ್ರಾಹಕರಿಗೆ ಸೂಕ್ತ ಬೆಲೆಯಲ್ಲಿ ಅಗತ್ಯ ವಸ್ತುಗಳನ್ನು ನೀಡುವುದಕ್ಕೂ ಆದ್ಯತೆ ನೀಡಬೇಕಾಗುತ್ತದೆ ಎಂದು ಹೇಳಿದೆ.

ಲೋಕಸಭೆಯಲ್ಲಿ ಮಾತನಾಡಿದ ಎನ್.ಸಿ.ಪಿ. ನಾಯಕಿ ಸುಪ್ರಿಯ ಸುಲೆ, ಸರ್ಕಾರದ ನಿಷೇಧ ಕ್ರಮವನ್ನು ಪ್ರಶ್ನಿಸಿದರು. ಕಳೆದ ಡಿಸೆಂಬರ್ 8ರಂದು ಈರುಳ್ಳಿ ರಫ್ತಿನ ಮೇಲೆ ನಿಷೇಧ ಹೇರಲಾಗಿತ್ತು. ಪ್ರಸಕ್ತ ಈರುಳ್ಳಿ ಬೆಲೆ ಕೆಜಿಗೆ 60 ರೂ.ಗಳಷ್ಟಿದೆ.

ಈ ಬಗ್ಗೆ ಉತ್ತರಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಸರ್ಕಾರ ರೈತರ ಹಾಗೂ ಗ್ರಾಹಕರ ಹಿತಗಳ ನಡುವೆ ಸಮತೋಲನ ಹೊಂದಬೇಕಿದೆ ಎಂದರು.

ಬೆಳೆಯ ಕೊರತೆ ಇದ್ದಾಗ ಹಾಗೂ ಈರುಳ್ಳಿ ರೀತಿಯ ಅಗತ್ಯ ವಸ್ತುಗಳನ್ನು ಮಾರುಕಟ್ಟೆಗೆ ತರುವಲ್ಲಿ ಸಮಸ್ಯೆಯಾದಾಗ ನಾವು ಭಾರತೀಯ ಗ್ರಾಹಕರಿಗೆ ಆದ್ಯತೆ ನೀಡಬೇಕಿದೆ. ಕೆಲವೊಮ್ಮೆ ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದರು.

## ಭದ್ರಾವತಿ ಕಾಗದ ಕಾರ್ಖಾನೆ ಪುನರಾರಂಭಕ್ಕೆ ಚಿಂತನೆ

ಬೆಳಗಾವಿ, ಡಿ. 12 - ಭದ್ರಾವತಿಯಲ್ಲಿರುವ ಮೈಸೂರು ಕಾಗದ ಕಾರ್ಖಾನೆಯ ಪುನರಾರಂಭಕ್ಕೆ ಸರ್ಕಾರವು ಸಕಾರಾತ್ಮಕವಾಗಿ ಚಿಂತನೆ ನಡೆಸಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ್ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಎಸ್.ರುದ್ರೇಗೌಡ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮೈಸೂರು ಕಾಗದ ಕಾರ್ಖಾನೆಯು ತೀವ್ರ ತರಹದ ಹಣಕಾಸಿನ ಸಮಸ್ಯೆಯನ್ನು ಎದುರಿಸುತ್ತಿದ್ದ ಕಾರಣ ಎಲ್ಲಾ ಉತ್ಪಾದನಾ ಘಟಕಗಳನ್ನು 2015ರಲ್ಲಿ ಸ್ಥಗಿತಗೊಳಿಸಲಾಗಿದೆ. ಜೂನ್ 2023ರ ಅಂತ್ಯಕ್ಕೆ ಒಟ್ಟು ಸಂಚಿತ ನಷ್ಟ 1,482 ಕೋಟಿ ರೂ. ಆಗಿದೆ ಎಂದರು.

# ಭಜನ್ ಲಾಲ್ ರಾಜಸ್ಥಾನ ಸಿಎಂ

## ಮೊದಲ ಬಾರಿಗೆ ಶಾಸಕರಾದ ಶರ್ಮಾಗೆ ಒಲಿದ ಸಿಎಂ ಗಾದಿ

ಜೈಪುರ, ಡಿ. 12 – ಮೊದಲ ಬಾರಿ ಶಾಸಕರಾಗಿರುವ ಭಜನ್ ಲಾಲ್ ಶರ್ಮಾ ಅವರನ್ನು ರಾಜಸ್ಥಾನದ ಮುಖ್ಯಮಂತ್ರಿಯಾಗಿ ಬಿಜೆಪಿ ಅಚ್ಚರಿಯ ಆಯ್ಕೆ ಮಾಡಿದೆ.



56 ವರ್ಷದ ಸಂಗನೇರ್ ಕ್ಷೇತ್ರದ ಶಾಸಕ ಶರ್ಮ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಮಾಡಲಾಗಿದೆ. ದಿಯಾ ಕುಮಾರಿ ಹಾಗೂ ಪ್ರೇಮ ಚಂದ್ ಬೈರ್ವ ಅವರು ಉಪ ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ. ವಸುದೇವ್ ದೇವನಾನಿ ಅವರು ವಿಧಾನಸಭಾಧ್ಯಕ್ಷ ರಾಗಲಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ವಸುಂಧರ ರಾಜೇ ಅವರ ಹೆಸರು ಕೇಳಿ ಬರುತ್ತಿತ್ತು. ಆದರೆ, ಆರ್.ಎಸ್.ಎಸ್. ಬೆಂಬಲಿತ ಶರ್ಮ ಅವರು ಮುಖ್ಯಮಂತ್ರಿ ಹುದ್ದೆಗೆ ಬಂದಿದ್ದಾರೆ.

ಶರ್ಮ ಪ್ರಸಕ್ತ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಸಂಗನೇರ್ ಕ್ಷೇತ್ರದಲ್ಲಿ ಅವರು 48,081 ಮತಗಳ ಅಂತರದ ಗೆಲುವು ಸಾಧಿಸಿದ್ದರು.

ಶಾಸಕಾಂಗ ಪಕ್ಷದ ಸಭೆಗೆ ಮುಂಚೆ ತೆಗೆಸಲಾದ ಗುಂಪು (4ನೇ ಪುಟಕ್ಕೆ)

## ಅಕ್ರಮ ವಲಸಿಗರ ನಿಖರ ಮಾಹಿತಿ ಸಂಗ್ರಹ ಸಾಧ್ಯವಾಗದು : ಕೇಂದ್ರ

ನವದೆಹಲಿ, ಡಿ. 12 – ವಾಮಮಾರ್ಗದಿಂದ ಬೇರೆ ದೇಶಗಳಿಂದ ಬಂದು ದೇಶದ ವಿವಿಧ ಭಾಗಗಳಲ್ಲಿರುವ ಅಕ್ರಮ ವಲಸಿಗರ ನಿಖರ ಮಾಹಿತಿ ಸಂಗ್ರಹಿಸುವುದು ಸಾಧ್ಯವಾಗದು ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ತಿಳಿಸಿದೆ.

ಅಸ್ಸಾಂನ ಅಕ್ರಮ ವಲಸಿಗರಿಗೆ ಸಂಬಂಧಿಸಿದಂತೆ ಪೌರತ್ವ ಕಾಯ್ದೆಯ ಸೆಕ್ಷನ್ 6ಎ ಸಿಂಧುತ್ವ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. ಈ ಸಂದರ್ಭದಲ್ಲಿ ನ್ಯಾಯಾಲಯದ ಎದುರು ಹಾಜರಾಗಿರುವ ಕೇಂದ್ರ ಸರ್ಕಾರ ಈ ನಿಲುವು ತಿಳಿಸಿದೆ.

1966-1971ರ ನಡುವೆ ವಿದೇಶಿಗರ ಟ್ರಿಬ್ಯೂನಲ್‌ಗಳ (4ನೇ ಪುಟಕ್ಕೆ)

## ಅಯೋಧ್ಯೆ ಮಂದಿರ ಪೂಜಾರಿ ಹೆಸರಿನಲ್ಲಿ ಅಶ್ಲೀಲ ಚಿತ್ರ

### ಗುಜರಾತ್ ಕೈ ನಾಯಕ ಬಂಧನ

ಅಹಮದಾಬಾದ್, ಡಿ. 12- ಅಯೋಧ್ಯೆಯಲ್ಲಿ ನಿರ್ಮಿಸಲಾಗುತ್ತಿರುವ ರಾಮ ಮಂದಿರದ ಅರ್ಚಕರ ಹೆಸರಿನಲ್ಲಿ ನಕಲಿ ಅಶ್ಲೀಲ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಮಾಡಿದ ಆರೋಪದ ಮೇಲೆ ಗುಜರಾತ್ ಕಾಂಗ್ರೆಸ್ ನಾಯಕ ಹಿತೇಂದ್ರ ಪಿಠಡಿಯ ಅವರನ್ನು ಬಂಧಿಸಲಾಗಿದೆ.

ಪಿಠಡಿಯ ಅವರು ಗುಜರಾತ್ ರಾಜ್ಯ ಎಸ್.ಸಿ. ಘಟಕದ ಅಧ್ಯಕ್ಷರಾಗಿದ್ದಾರೆ. ಸ್ಥಳೀಯ ಬಿಜೆಪಿ ನಾಯಕ ವೈಭವ್ ಮಕ್ವಾನ ಅವರು ನೀಡಿದ ದೂರಿನ ಆಧಾರದ ಮೇಲೆ ಅಹಮದಾಬಾದ್ ನಗರ ಪೊಲೀಸರ ಸೈಬರ್ ಅಪರಾಧ ದಳ ಬಂಧನದ ಕ್ರಮ ತೆಗೆದುಕೊಂಡಿದೆ.

ಮೋಹಿತ್ ಪಾಂಡೆ ಅವರನ್ನು ಇತ್ತೀಚೆಗೆ ರಾಮ ಮಂದಿರ ದೇವಾಲಯದ ಅರ್ಚಕರನ್ನಾಗಿ ನೇಮಿಸಲಾಗಿತ್ತು.

ಮೋಹಿತ್ ಪಾಂಡೆ ಅವರು ಮಹಿಳೆಯೊಬ್ಬರ ಜೊತೆ ಇದ್ದಾರೆ ಎನ್ನಲಾದ ಅಶ್ಲೀಲ ಚಿತ್ರವನ್ನು ಪಿಠಡಿಯ ಜಾಲತಾಣದಲ್ಲಿ ಪ್ರಕಟಿಸಿ, 'ಇಂಥವರನ್ನು ಅಯೋಧ್ಯೆ ರಾಮ (4ನೇ ಪುಟಕ್ಕೆ)

## ಉಗ್ರರ ದಾಳಿಯಲ್ಲಿ 23 ಪಾಕ್ ಸೈನಿಕರು ಹತ

ಪೇಷಾವರ, ಡಿ. 12 -ಪಾಕಿಸ್ತಾನ ತಾಲಿಬಾನ್‌ನ ಆರು ಉಗ್ರರು ಸೈನ್ಯದ ಠಾಣೆಯ ಮೇಲೆ ನಡೆಸಿದ ದಾಳಿಯಲ್ಲಿ 23 ಸೈನಿಕರು ಹತರಾಗಿದ್ದಾರೆ ಹಾಗೂ 30 ಇತರರು ಗಾಯಗೊಂಡಿದ್ದಾರೆ.

ಖೈಬರ್ - ಪಖ್ತುಂಖ್ವ ಪ್ರಾಂತ್ಯದ ದಕ್ಷಿಣ ವಾಜಿರಿಸ್ತಾನ ಬುಡಕಟ್ಟು ಜಿಲ್ಲೆಯ ಗಡಿಯಲ್ಲಿ ಈ ದಾಳಿ ನಡೆಸಲಾಗಿದೆ ಎಂದು ಸೈನ್ಯ ತಿಳಿಸಿದೆ. ಸ್ಫೋಟಕ ತುಂಬಿದ ವಾಹನದೊಂದಿಗೆ ಠಾಣೆಗೆ (4ನೇ ಪುಟಕ್ಕೆ)

## ಸಿ.ಬಿ.ಎಸ್.ಇ. : ಫೆ.15ರಿಂದ 10, 12ನೇ ತರಗತಿ ಪರೀಕ್ಷೆ

ನವದೆಹಲಿ, ಡಿ. 12 – ಸಿ.ಬಿ.ಎಸ್.ಇ.ನ ಹತ್ತು ಹಾಗೂ 12ನೇ ತರಗತಿ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಎರಡೂ ತರಗತಿಗಳ ಪರೀಕ್ಷೆಗಳು ಫೆಬ್ರವರಿ 15ರಿಂದ ಆರಂಭವಾಗಲಿವೆ.

ಹತ್ತನೇ ತರಗತಿ ಪರೀಕ್ಷೆಗಳು ಮಾರ್ಚ್ 13ರಂದು ಹಾಗೂ 12ನೇ ತರಗತಿ ಪರೀಕ್ಷೆಗಳು ಏಪ್ರಿಲ್ 2ರಂದು ಪೂರ್ಣಗೊಳ್ಳಲಿವೆ. ಎರಡು ವಿಷಯಗಳ ನಡುವೆ ಸಮರ್ಪಕ ಅಂತರ ಇರುವಂತೆ (5ನೇ ಪುಟಕ್ಕೆ)

## ನೌಕರರು ಖಾಸಗಿ ಪ್ರಶಸ್ತಿಗೆ ಅನುಮತಿ ಕಡ್ಡಾಯ

**ಕೇಂದ್ರದ ಹೊಸ ಮಾರ್ಗಸೂಚಿ**

ನವದೆಹಲಿ, ಡಿ. 12 – ಖಾಸಗಿ ಸಂಘಟನೆಗಳಿಂದ ಸರ್ಕಾರಿ ಉದ್ಯೋಗಿಗಳು ಪ್ರಶಸ್ತಿ ಪಡೆಯುವ ಬಗ್ಗೆ ಕೇಂದ್ರ ಸರ್ಕಾರ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಇದರೊಂದಿಗೆ ಖಾಸಗಿ ಪ್ರಶಸ್ತಿ ಸ್ವೀಕರಿಸಲು ಪೂರ್ವಾನುಮತಿ ಕಡ್ಡಾಯವಾಗಿದೆ.

ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಪ್ರಶಸ್ತಿ ಸ್ವೀಕರಿಸಲು ಅನುಮತಿ ನೀಡಲಾಗುವುದು. ಅಲ್ಲದೇ ಈ ಪ್ರಶಸ್ತಿಯಲ್ಲಿ ನಗದು ಅಂಶ ಇರಬಾರದು ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯ ಹೇಳಿದೆ.

ಈಗಿರುವ ನಿರ್ದೇಶನಗಳನ್ನು ಸಮರ್ಪಕವಾಗಿ ಪಾಲಿಸದ ಕಾರಣ ಹೊಸ ಮಾರ್ಗಸೂಚಿ ಪ್ರಕಟಿಸಲಾಗಿದೆ.

ಪ್ರಶಸ್ತಿ ಸ್ವೀಕರಿಸುವುದಕ್ಕೆ ಮುಂಚೆ ಸರ್ಕಾರಿ ನೌಕರರು ಸಂಬಂಧಿಸಿದ ಸಚಿವಾಲಯ, ಇಲ್ಲವೇ ಇಲಾಖೆಗಳ ಕಾರ್ಯದರ್ಶಿಗಳಿಂದ ಅನುಮತಿ (5ನೇ ಪುಟಕ್ಕೆ)

# ಕೆಲಸದ ಹೊರೆ ಏರಿಕೆ, ಸಿಬ್ಬಂದಿ ಕೊರತೆ

## ರಾಜ್ಯಾದ್ಯಂತ ಪಶುಪಾಲನಾ ಇಲಾಖೆಯಲ್ಲಿ ಉಲ್ಬಣಿಸಿದ ಸಮಸ್ಯೆ

ದಾವಣಗೆರೆ, ಡಿ. 12 - ಯುದ್ಧ ಮಾಡಬೇಕಿದೆ, ಆದರೆ ಸೈನಿಕರೂ ಇಲ್ಲ - ಸೇನಾಧಿಪತಿಗಳದೂ ಕೊರತೆ. ಈ ಪರಿಸ್ಥಿತಿ ಇರುವುದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ.

ಇಡೀ ರಾಜ್ಯದಲ್ಲಿ ಪಶುವೈದ್ಯಕೀಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಕಾಡುತ್ತಿದೆ. ದಾವಣಗೆರೆ ಜಿಲ್ಲೆಯೂ ಇದಕ್ಕೆ ಹೊರತಾಗಿಲ್ಲ. ಜಿಲ್ಲೆಯಲ್ಲಿ ಪಶುಪಾಲನಾ ಇಲಾಖೆಯ 614 ಹುದ್ದೆಗಳಿವೆ. ಇದರಲ್ಲಿ 356 ಹುದ್ದೆಗಳು ಖಾಲಿ. ಅಂದರೆ ಶೇ.42ರಷ್ಟು ಹುದ್ದೆಗಳು ಮಾತ್ರ ಭರ್ತಿ ಇವೆ.

ಇಲಾಖೆಯಲ್ಲಿ ಡಿ ದರ್ಜೆ ಉದ್ಯೋಗಿಗಳ ಸಂಖ್ಯೆಯಂತೂ ತೀರಾ ಕಡಿಮೆ ಇದೆ. ಒಟ್ಟು 238 ಹುದ್ದೆಗಳಲ್ಲಿ ಪೂರ್ಣ ಕಾಲಿಕ ಸಿಬ್ಬಂದಿ ಇರುವುದು 33 ಮಾತ್ರ. 88 ಹುದ್ದೆಗೆ ಹೊರಗುತ್ತಿಗೆಯಲ್ಲಿ ನೇಮಿಸಲಾಗಿದೆ. ಹೀಗಾಗಿ ಇಲಾಖೆಯ ಕಾರ್ಯನಿರ್ವಹಣೆ ಮೇಲೆ ತೀವ್ರ ಪರಿಣಾಮವಾಗುತ್ತಿದೆ.

ಉಪ ನಿರ್ದೇಶಕರಿಂದ ಹಿಡಿದು ಡಿ ದರ್ಜೆ ನೌಕರರವರೆಗೆ ಹಲವಾರು ಹುದ್ದೆಗಳು ಖಾಲಿ ಇವೆ. ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆ 82 ಇದ್ದರೆ, 30 ಖಾಲಿ ಇವೆ. ಪಶು ವೈದ್ಯಕೀಯ ಪರೀಕ್ಷಕರ 61 ಹುದ್ದೆಗಳಲ್ಲಿ 29 ಖಾಲಿ, ಕಿರಿಯ ಪಶುವೈದ್ಯಕೀಯ ಪರೀಕ್ಷಕರ 91 ಹುದ್ದೆಗಳಲ್ಲಿ 70 ಖಾಲಿ ಇವೆ.

ಇಷ್ಟು ಸಾಲದು ಎಂಬಂತೆ, ಜನರ ಬೇಡಿಕೆಯನ್ನು ಪರಿಗಣಿಸಿ ಸರ್ಕಾರ ಹೊಸ ಹೊಸ ಪಶು ಆಸ್ಪತ್ರೆಗಳನ್ನು ತೆರೆಯುತ್ತಿದೆ. ಆದರೆ, ಸಿಬ್ಬಂದಿ ಮಾತ್ರ ನೇಮಿಸುತ್ತಿಲ್ಲ. ಇರುವ ವೈದ್ಯರಿಗೇ ಎರಡೆರಡು ಆಸ್ಪತ್ರೆಗಳ ಹೊಣೆ ನೀಡಲಾಗುತ್ತಿದೆ. ವೈದ್ಯರು ಅಲ್ಲೂ ಇಲ್ಲ, ಇಲ್ಲೂ ಇಲ್ಲ ಎಂಬಂತೆ ಪರದಾಡುವ ಪರಿಸ್ಥಿತಿ ಇದೆ.

ಹೊಸದಾಗಿ ನ್ಯಾಮತಿ ತಾಲ್ಲೂಕು ರೂಪಿಸಲಾಗಿದೆಯಾದರೂ, ಅಲ್ಲಿ ವೈದ್ಯಕೀಯ ಸೇವಾ (3ನೇ ಪುಟಕ್ಕೆ)

### ಜ.1ರಿಂದ ಅನಿರ್ದಿಷ್ಟಾವಧಿ ಅಸಹಕಾರ

**ರಾಜ್ಯದ್ಯಂತ ವೈದ್ಯಕೀಯ ಸಿಬ್ಬಂದಿ ಕೊರತೆ, ಪದೋನ್ನತಿ ನೀಡದಿರುವುದು ಮುಂತಾದ ಸಮಸ್ಯೆಗಳ ಹಿನ್ನೆಲೆಯಲ್ಲಿ ಕರ್ನಾಟಕ ಪಶುವೈದ್ಯಕೀಯ ಸಂಘವು ಬರುವ ಜನವರಿ 1ರಿಂದ ಅನಿರ್ದಿಷ್ಟಾವಧಿಯ ಅಸಹಕಾರ ಚಳುವಳಿ ಹಮ್ಮಿಕೊಳ್ಳಲು ನಿರ್ಧರಿಸಿದೆ ಎಂದು ಸಂಘದ ದಾವಣಗೆರೆ ಶಾಖೆಯ ಅಧ್ಯಕ್ಷ ಡಾ. ಎಸ್. ಚಂದ್ರಶೇಖರ ಸುಂಕದ್ ತಿಳಿಸಿದ್ದಾರೆ. ಸಮರ್ಪಕ ಔಷಧ ಪೂರೈಕೆ, ಹೊಸ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಕಚೇರಿ ಆರಂಭ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು, ಅಧಿಕ ಪ್ರಭಾರ ಕರ್ತವ್ಯ ನಿರ್ವಹಿಸುವವರಿಗೆ ನಿಯಮಿತ ಭತ್ಯೆಯ ಬೇಡಿಕೆಗಳನ್ನು ಡಿಸೆಂಬರ್ 31ರ ಒಳಗೆ ಈಡೇರಿಸುವಂತೆ ಸಂಘ ಒತ್ತಾಯಿಸಿದೆ.**

## ಚುನಾವಣೆಯಲ್ಲಿ ಬಿಜೆಪಿಗೆ ಅಧಿಕಾರದ ಸಾಧ್ಯತೆ ಹೆಚ್ಚು : ಫಿಚ್


ನವದೆಹಲಿ, ಡಿ. 12 – ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಅಧಿಕಾರ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ ಎಂದು ಶ್ರೇಯಾಂಕ ಸಂಸ್ಥೆಯಾದ ಫಿಚ್ ರೇಟಿಂಗ್ಸ್ ತಿಳಿಸಿದೆ.

ಆದರೆ, ಮುಂದಿನ ಚುನಾವಣೆಯಲ್ಲಿ ದೊರೆಯಬಹುದಾದ ಬಹುಮತದ ಗಾತ್ರ ಆಡಳಿತ ಸುಧಾರಣೆಯ ಮೇಲೆ ಪರಿಣಾಮ ಬೀರಬಹುದು ಎಂದು ಫಿಚ್ ಹೇಳಿದೆ.

ವೇದ ವೆಲ್ನೆಸ್ ಸೆಂಟರ್, ನಿಸರ್ಗ ಮನೆ ಶಿರಸಿ
Nisarga Mane
ಡಾ. ವೆಂಕಟರಮಣ ಹೆಗಡೆರವರು ಮುಖತಃ ಭೇಟಿಗೆ ದಾವಣಗೆರೆಯಲ್ಲಿ ಲಭ್ಯ!



ದಿನಾಂಕ : ಡಿಸೆಂಬರ್ 16 & 17
ಶನಿವಾರ - 12 PM TO 6 PM
ಭಾನುವಾರ - 10 AM TO 6 PM
ಸ್ಥಳ : SLN Convent
#3742/1A, 13ನೇ ಕ್ರಾಸ್, ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹಿಂಭಾಗ, ಸಿದ್ದವೀರಪ್ಪ ಬಡಾವಣೆ, BIET, ದಾವಣಗೆರೆ
ಸಂದರ್ಶನ ಉಚಿತ
ನೋಂದಣಿಗೆ ಇಂದೇ ಕರೆ ಮಾಡಿ
8073320479, 8970822508



# ದೇಶಕ್ಕೆ ಅನ್ನ ನೀಡುವ ರೈತರ ಸಾಲ ಮನ್ನಾಕ್ಕೆ ಕೇಂದ್ರಕ್ಕೆ ಆಗ್ರಹ



ಹೊನ್ನಾಳಿ, ಡಿ.12- ಕೇಂದ್ರ ಸರ್ಕಾರ ದೇಶದ ಉದ್ಯಮಿಗಳ ರೂ. 11 ಲಕ್ಷ ಕೋಟಿ ಸಂಕಷ್ಟ ನೆರವು ಸಾಲ ಮನ್ನಾ ಮಾಡಿರುವ ರೀತಿಯಲ್ಲಿಯೇ ದೇಶದ 140 ಕೋಟಿ ಜನರಿಗೆ ಅನ್ನ ನೀಡುವ ರೈತ ಸಮುದಾಯದ ಸಾಲವನ್ನೂ ಕೂಡ ಮನ್ನಾ ಮಾಡಬೇಕು ಎಂದು ರಾಜ್ಯ ರೈತ ಸಂಘಗಳ ಒಕ್ಕೂಟದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಒತ್ತಾಯಪಡಿಸಿದರು.

ಅವರು ಮಂಗಳವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ರೈತ ಸಂಘದ ಒಕ್ಕೂಟದ ವತಿಯಿಂದ ನಡೆಸಲಾದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ರಾಜ್ಯ ರೈತ ಸಂಘಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘಗಳ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ 23ರಂದು ವಿಶ್ವ ರೈತ ದಿನದಂದು ಬೆಂಗಳೂರಿನಲ್ಲಿ ರೈತರ ಮಹಾ ಅಧಿವೇಶನ ನಡೆಯಲಿದ್ದು, ಈ ಅಧಿವೇಶನದಲ್ಲಿ ರಾಜ್ಯ ರೈತ ಸಮುದಾಯ ಸಮಗ್ರ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಸಮಗ್ರ ಚಿಂತನೆ ಮತ್ತು ಚರ್ಚೆಗಳು ನಡೆಯಲಿವೆ ಎಂದು ತಿಳಿಸಿದರು.

ರೈತರು ಬರಗಾಲದ ಬೆಳೆ ನಷ್ಟದಿಂದ ತೀವ್ರ ಸಂಕಷ್ಟಕ್ಕೀಡಾಗಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರಿಗೆ ಬರ ಪರಿಹಾರ ನೀಡದೇ ನಿರ್ಲಕ್ಷ್ಯ ತೋರುತ್ತಿವೆ. ಕೂಡಲೇ ಬರ ಪರಿಹಾರದ ರೂಪದಲ್ಲಿ ಕೃಷಿ ಬೆಳೆಗೆ 35 ಸಾವಿರ ಹಾಗೂ ತೋಟಗಾರಿಕೆ ಬೆಳೆಗಳ ನಷ್ಟಕ್ಕೆ ಎಕರೆಗೆ 50 ಸಾವಿರ ಬರ ಪರಿಹಾರ ನೀಡಬೇಕು ಎಂದು ಒತ್ತಾಯಪಡಿಸಿದರು.

ಎಲ್ಲಾ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಯಾಗಬೇಕು. ಸ್ವಾಮಿನಾಥನ್ ಆಯೋಗದ ವರದಿಯಂತೆ ಬೆಂಬಲ ಬೆಲೆ ನಿಗದಿಯಾಗಬೇಕು. ಕಬ್ಬಿನ ಉತ್ಪಾದನಾ ವೆಚ್ಚ ಹೆಚ್ಚಾಗಿದ್ದು, ಪ್ರತಿ ಟನ್‌ಗೆ ಉತ್ಪಾದನಾ ವೆಚ್ಚ ರೂ.3580 ಆಗಿದ್ದು, ಕೇಂದ್ರ ಸರ್ಕಾರ ನಿಗದಿ ಮಾಡಿರುವುದು ರೂ. 3150. ಮಾತ್ರ ಕಬ್ಬಿನ ದರ ಕನಿಷ್ಟ ಟನ್‌ಗೆ ರೂ. 4 ಸಾವಿರ ನಿಗದಿಮಾಡಬೇಕು ಎಂದು ಹೇಳಿದರು.

60 ವರ್ಷ ದಾಟಿದ ರೈತರಿಗೆ ಕನಿಷ್ಟ ರೂ. 5 ಸಾವಿರ ಪಿಂಚಣಿ ಯೋಜನೆ ಜಾರಿಗೆ ತರಬೇಕು, ದೆಹಲಿ ಮತ್ತು ರಾಜ್ಯದಲ್ಲಿ ಒಂದು ವರ್ಷಗಳ ಕಾಲ ಹೋರಾಟ ಮಾಡಿದ ರೈತರ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಬೇಕು 1971ರಿಂದ 2023ರವರೆಗೆ ಬಗರ್ ಹುಕ್ಕುಂ ನಮೂನೆ 50, 53, 57 ಕಲಂ ಅಡಿ ಸಾಗುವಳಿ ಮಾಡಿದ ರೈತರಿಗೆ ತುರ್ತಾಗಿ ಹಕ್ಕುಪತ್ರ ನೀಡಬೇಕು. ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡವರಿಗೆ 94(ಸಿ) ಅಡಿಯಲ್ಲಿ ಹಕ್ಕುಪತ್ರ ಕೂಡಲೇ ನೀಡಬೇಕು ಎಂದು ಆಗ್ರಹಿಸಿದರು

ಕೃಷಿ ಪಂಪಸೆಟ್‌ಗಳಿಗೆ ನೀಡುವ ಉಚಿತ ವಿದ್ಯುತ್ ತಪ್ಪಿಸಲು ವಿದ್ಯುತ್ ಖಾಸಗೀಕರಣ ನೀತಿಯನ್ನು ಕೇಂದ್ರ ಸರ್ಕಾರ ಕೈಬಿಡಬೇಕು ರಾಜ್ಯ ಸರ್ಕಾರ 10 ಗಂಟೆ ವಿದ್ಯುತ್ ನೀಡಬೇಕು. ಬೆಳೆ ವಿಮೆ ಸರಿಯಾಗಿ ರೈತರಿಗೆ ತಲುಪುವಂತಾಗಲು ಬೆಳೆ ವಿಮಾ ನಿಯಮಾವಳಿಗಳನ್ನು ಸರಳೀಕರಣಗೊಳಿಸಬೇಕೆಂದು ಅವರು ಅಗ್ರಹಿಸಿದರು.

**ಎಸ್ಪಿ ಅಮಾನತ್ತುಗೊಳಿಸಬೇಕು** : ಬೆಳಗಾವಿಯಲ್ಲಿ ನಡೆದ ಅಧಿವೇಶನದ ವೇಳೆ ಹಲವಾರು ಬೇಡಿಕೆಗಳ ಬಗ್ಗೆ ಮನವಿ ನೀಡಲು ಹೋಗಿದ್ದ ರೈತ ಸಮುದಾಯದ ವಿರುದ್ಧ ದರ್ಪ ಮೆರೆದ ಅಲ್ಲಿನ ಪೊಲೀಸ್ ವರಿಷ್ಠಾಧಿಕಾರಿಯವರನ್ನು ಅಮಾನತ್ತು ಮಾಡಬೇಕು ಹಾಗೂ ಬೇರೆ ರಾಜ್ಯಕ್ಕೆ ವರ್ಗಾಯಿಸಬೇಕು ಎಂದು ಬಲ್ಲೂರು ರವಿಕುಮಾರ್ ಸರ್ಕಾರಕ್ಕೆ ಒತ್ತಾಯಪಡಿಸಿದರು.

ರೈತ ಸಂಘದ ಹೊನ್ನಾಳಿ ತಾಲ್ಲೂಕು ಅಧ್ಯಕ್ಷ ಕೆ.ಸಿ.ಬಸಪ್ಪ, ನ್ಯಾಮತಿ ತಾಲ್ಲೂಕು ಅಧ್ಯಕ್ಷ ಬೆಳಗುತ್ತಿ ಉಮೇಶ್ ರೈತರ ಸಮಸ್ಯೆಗಳ ಕುರಿತು ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಸುಂಕದಕಟ್ಟೆ ಕರಿಬಸಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ನಂದಿತಾವರೆ ಮುರುಗೇಂದ್ರಯ್ಯ, ಜಿಲ್ಲಾ ಮುಖಂಡ ಅಂಜಿನಪ್ಪ, ಕೊಮಾರನಹಳ್ಳಿ ಮಂಜುನಾಥ್, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

### ರೈತನ ಮಗನನ್ನು ಮದುವೆಯಾಗುವ ಹೆಣ್ಣಿಗೆ ಶೇ. 10 ಮೀಸಲಾತಿ

ದೇಶಕ್ಕೆ ಅನ್ನ ನೀಡುವ ರೈತ ಕುಟುಂಬದ ಗಂಡು ಮಕ್ಕಳಿಗೆ ಪ್ರಸ್ತುತ ದಿನಗಳಲ್ಲಿ ಹೆಣ್ಣು ಕೊಡಲು ಯಾರೂ ಕೂಡ ಮುಂದೆ ಬರುತ್ತಿಲ್ಲ. ಈ ಕಾರಣದಿಂದ ರೈತರ ಮಗನನ್ನು ಮದುವೆಯಾಗಲು ಮುಂದೆ ಬರುವ ಹೆಣ್ಣು ಮಕ್ಕಳಿಗೆ ಅವರ ವಿದ್ಯಾರ್ಹತೆಗನುಗುಣವಾಗಿ ಸರ್ಕಾರಿ ಉದ್ಯೋಗದಲ್ಲಿ ಶೇಕಡ 10ರಷ್ಟು ಮೀಸಲಾತಿ ಸರ್ಕಾರಗಳು ಘೋಷಣೆ ಮಾಡಬೇಕು.

**- ಬಲ್ಲೂರು ರವಿಕುಮಾರ್,**
ಕಾರ್ಯದರ್ಶಿ,
ರಾಜ್ಯ ರೈತ ಸಂಘಗಳ ಒಕ್ಕೂಟ

# 16 ರಂದು ಹರಿಹರದಲ್ಲಿ ವೀರಶೈವ ಮಹಾಸಭಾದ ಪೂರ್ವಭಾವಿ ಸಭೆ



ಹರಿಹರ, ಡಿ. 12- ದಾವಣಗೆರೆಯಲ್ಲಿ ಇದೇ ದಿನಾಂಕ 23 ಮತ್ತು 24 ರಂದು ಅಖಿಲ ಭಾರತ ವೀರಶೈವ ಮಹಾಸಭಾದ 24 ನೇ ಮಹಾ ಅಧಿವೇಶನ ನಡೆಯಲಿದ್ದು, ನಾಡಿನ ಹಲವಾರು ಮಠಾಧೀಶರು, ವಿವಿಧ ಪಕ್ಷಗಳ ಮುಖಂಡರು, ಸಮಾಜದ ಗಣ್ಯರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸುವುದರಿಂದ, ಮಹಾ ಅಧಿವೇಶನ ಯಶಸ್ವಿಯಾಗಿಸುವ ದೃಷ್ಟಿಯಿಂದ ಹರಿಹರ ತಾಲ್ಲೂಕಿನ ಸಮಸ್ತ ವೀರಶೈವ ಸಮಾಜ ಬಾಂಧವರ ಸಭೆಯನ್ನು ಇದೇ ದಿನಾಂಕ 16 ರಂದು ಶನಿವಾರ ಬೆಳಗ್ಗೆ 11 ಗಂಟೆಗೆ ದೇವಸ್ಥಾನ ರಸ್ತೆಯ ರೇಣುಕಾ ಮಂದಿರದಲ್ಲಿ ಕರೆಯಲಾಗಿದೆ ಎಂದು ಅಖಿಲ ಭಾರತ ವೀರಶೈವ ಸಮಾಜದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ ತಿಳಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಈ ಮಹಾ ಅಧಿವೇಶನದಲ್ಲಿ ರಾಜ್ಯದಾದ್ಯಂತ ಲಕ್ಷಾಂತರ ವೀರಶೈವ ಸಮಾಜದವರು ಭಾಗವಹಿಸಲಿದ್ದಾರೆ. ದಾವಣಗೆರೆಯ ಮಧ್ಯ ಕರ್ನಾಟಕ ಭಾಗದಲ್ಲಿ ಮಹಾ ಅಧಿವೇಶನ ನಡೆಯುವುದರಿಂದ ಇದೊಂದು ಐತಿಹಾಸಿಕ ಮಹಾ ಅಧಿವೇಶನವಾಗಿ ಮಾರ್ಪಾಡಾಗಲಿದೆ ಎಂದರು.

ಹರಿಹರ ತಾಲ್ಲೂಕಿನಲ್ಲೂ ಕೂಡ ವೀರಶೈವ ಸಮಾಜದವರು ಹೆಚ್ಚಿನ ಪ್ರಮಾಣದಲ್ಲಿ ಇರೋದರಿಂದ ಈ ಮಹಾ ಅಧಿವೇಶನದಲ್ಲಿ ಕನಿಷ್ಠ ಪಕ್ಷ 25 ಸಾವಿರಕ್ಕೂ ಹೆಚ್ಚು ವೀರಶೈವ ಸಮಾಜದವರು ಭಾಗವಹಿಸುವ ನಿರೀಕ್ಷೆ ಇದೆ.

ಮಹಾ ಅಧಿವೇಶನದಲ್ಲಿ ಭಾಗವಹಿಸುವ ವೀರಶೈವ ಸಮಾಜದವರಿಗೆ ನೋಂದಣಿ ಇರಲೇಬೇಕು ಎಂಬ ಭಾವನೆಗಳು ಬೇಡ. ನೋಂದಣಿ ಇಲ್ಲದವರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಈ ಐತಿಹಾಸಿಕ ಮಹಾ ಅಧಿವೇಶನದಲ್ಲಿ ಪಾಲ್ಗೊಂಡು ಸಮಾರಂಭಕ್ಕೆ ಸಾಕ್ಷಿ ಆಗುವಂತೆ ಹೇಳಿದರು.

ಕಾಂಗ್ರೆಸ್ ಮುಖಂಡ ಜಿ.ಬಿ. ಹಾಲೇಶಗೌಡ್ರು ಗುತ್ತೂರು ಮಾತನಾಡಿ, ವೀರಶೈವ ಮಹಾ ಅಧಿವೇಶನ ಯಶಸ್ವಿಯಾಗಿಸುವ ದೃಷ್ಟಿಯಿಂದ ತಾಲ್ಲೂಕಿನ ಗ್ರಾಮಗಳಿಗೆ ಭೇಟಿ ಕೊಟ್ಟು ಸಮಾಜ ಬಾಂಧವರಿಗೆ ಮಹಾ ಅಧಿವೇಶನದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಹಲಸಬಾಳು ಎಚ್.ಎಂ. ಶಿವಾನಂದಪ್ಪ, ಟಿ.ಜೆ. ಮುರುಗೇಶಪ್ಪ, ಜಿ.ಕೆ. ಮಲ್ಲಿಕಾರ್ಜುನ್, ವೀರೇಶ್ ಯಾದವಾಡ, ಕಂಚಿಕೇರಿ ಕರಿಬಸಪ್ಪ, ಶಶಿದರಗೌಡ, ಎನ್. ಸುರೇಶ್ ಸ್ವಾಮಿ, ಜಿ.ವಿ. ಪ್ರವೀಣ್, ಕರಿಬಸಪ್ಪ ಗುತ್ತೂರು, ಕೆ.ಸಿ. ಪಾಟೀಲ್, ಬಸವರಾಜ್ ಪಾಟೀಲ್, ಇತರರು ಹಾಜರಿದ್ದರು.

# ಉಕ್ಕಡಗಾತ್ರಿ : ಅಜ್ಜಯ್ಯನ ದರ್ಶನಕ್ಕೆ ಭಾರೀ ಜನ



ಮಲೇಬೆನ್ನೂರು, ಡಿ.12- ಅಮಾವಾಸ್ಯೆ ಅಂಗವಾಗಿ ಮಂಗಳವಾರ ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದಿಗೆ ದರ್ಶನಕ್ಕಾಗಿ ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು.

ದೇವಸ್ಥಾನದ ಎಲ್ಲಾ ವಸತಿ ಗೃಹಗಳು ಭರ್ತಿ ಆಗಿದ್ದರಿಂದ ಭಕ್ತರು ದೇವಸ್ಥಾನದ ಆವರಣದಲ್ಲಿಯೇ ತಂಗಿದ್ದರು. ಗದ್ದಿಗೆ ಟ್ರಸ್ಟ್ ಕಮಿಟಿಯವರು ಎಲ್ಲರಿಗೂ ಅನ್ನ ಸಂತರ್ಪಣೆಯ ವ್ಯವಸ್ಥೆ ಮಾಡಿದ್ದರು. ತುಂಗಭದ್ರಾ ನದಿಯಲ್ಲಿ ಭಕ್ತರು ಪುಣ್ಯ ಸ್ನಾನ ಮಾಡಿ, ನಂತರ ಸರದಿ ಸಾಲಿನಲ್ಲಿ ನಿಂತು ಅಜ್ಜಯ್ಯನ ದರ್ಶನ ಪಡೆದರು.

**ಬೆಳ್ಳಿ ರಥೋತ್ಸವ** : ಇದೇ ದಿನಾಂಕ 18 ರ ಸೋಮವಾರ ಉಕ್ಕಡಗಾತ್ರಿಯಲ್ಲಿ ಕಡೇ ಕಾರ್ತಿಕೋತ್ಸವದ ಅಂಗವಾಗಿ ಅಜ್ಜಯ್ಯನ ಬೆಳ್ಳಿ ರಥೋತ್ಸವ ಮತ್ತು ರಾಜ್ಯ ಮಟ್ಟದ ಭಜನಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಗದ್ದಿಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಲಿಂಗಾಯತ ಮಹಾಸಭಾ ಮಹಿಳಾ ಘಟಕದ ಉದ್ಘಾಟನೆ

ಜಾಗತಿಕ ಲಿಂಗಾಯತ ಮಹಾಸಭಾ ದಾವಣಗೆರೆ ಜಿಲ್ಲಾ ಮಹಿಳಾ ಘಟಕದ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಬಸವ ಬಳಗದ ಸಭಾಂಗಣದಲ್ಲಿ ನಡೆಯಲಿದೆ.

ಪಾಂಡೋಮಟ್ಟಿ - ಕಮ್ಮತ್ತಹಳ್ಳಿ ವಿರಕ್ತಮಠದ ಡಾ. ಗುರುಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಮಹಿಳಾ ಸಂಚಾಲಕರಾದ ಮುಕ್ತಾ ಕಾರ್ಯಕ್ರಮ ಉದ್ಘಾಟಿಸಲಿದ್ದು, ಬಸವ ಬಳಗದ ಅಧ್ಯಕ್ಷ ಎ.ಹೆಚ್. ಹುಚ್ಚಪ್ಪ ಮಾಸ್ತರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಬೆಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಹೆಚ್.ಎಂ. ಸೋಮಶೇಖರಪ್ಪ, ಮಹಾಸಭಾ ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಅಗಡಿ ಭಾಗವಹಿಸಲಿದ್ದಾರೆ.

# ನಗರದಲ್ಲಿ ನಾಳೆ ಜಿಲ್ಲಾ ಮಟ್ಟದ 'ಸಿರಿಧಾನ್ಯ ಪಾಕ' ಸ್ಪರ್ಧೆ

ದಾವಣಗೆರೆ, ಡಿ. 12- ಅಂತರರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳದ ಅಂಗವಾಗಿ ನಾಡಿದ್ದು ದಿನಾಂಕ 14 ರಂದು ಬೆಳಿಗ್ಗೆ 11 ಗಂಟೆಗೆ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಸಿರಿಧಾನ್ಯ ಪಾಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಪ್ರತಿ ಸ್ಪರ್ಧಿಗೆ ಒಂದೇ ಸಿಹಿ ಅಥವಾ ಖಾರ (ಸಸ್ಯಹಾರಿ ತಿನಿಸುಗಳು ಮಾತ್ರ) ತಯಾರಿಸುವ ಅವಕಾಶವಿರುತ್ತದೆ. ತಮ್ಮ ಅರ್ಜಿಯಲ್ಲಿ ನಮೂದಿಸಿದ ತಿನಿಸುಗಳನ್ನು ಮನೆಯಲ್ಲಿಯೇ ತಯಾರಿಸಿ, ದಿನಾಂಕ 14 ರಂದು ಪ್ರದರ್ಶಿಸಬೇಕು. ತಯಾರಿಸಿದ ತಿನಿಸುಗಳ ಪ್ರದರ್ಶನ ಬಳಸಿದ ಸಾಮಗ್ರಿಗಳು, ತೋರಿಕೆ ರುಚಿ, ಸುವಾಸನೆ, ಪೌಷ್ಠಿಕತೆ ಮೇಲೆ ಅಂತಿಮ ತೀರ್ಪು ಕೈಗೊಳ್ಳಲಾಗುವುದು. ಜಿಲ್ಲಾ ಮಟ್ಟಕ್ಕೆ ಪ್ರಥಮ ಬಹುಮಾನವಾಗಿ ಖಾರ ತಿನಿಸು ಅಥವಾ ಸಿಹಿ ತಿನಿಸಿಗೆ ಐದು ಸಾವಿರ ರೂ. ಬಹುಮಾನವಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದವರು ಇದೇ ದಿನಾಂಕ 23 ರಂದು ಬೆಂಗಳೂರಿನಲ್ಲಿ ಏರ್ಪಡಿಸಿರುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಬೇಕು.

ಸ್ಪರ್ಧೆಯಲ್ಲಿ ಜಿಲ್ಲೆಯ ಸಾರ್ವಜನಿಕರು ಭಾಗವಹಿಸಬಹುದು. ಆಸಕ್ತರು ನಾಳೆ ದಿನಾಂಕ 13 ರೊಳಗಾಗಿ ಹತ್ತಿರದ ಕೃಷಿ ಇಲಾಖೆ ಕಚೇರಿ, ರೈತ ಸಂಪರ್ಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : 8277931208, 9964221906.

# ಚುನಾವಣಾ ಆಯುಕ್ತರ ನೇಮಕ, ಸೇವೆಗಳ ಮಸೂದೆಗೆ ಅಂಗೀಕಾರ

ನವದೆಹಲಿ, ಡಿ. 12 – ಮುಖ್ಯ ಚುನಾವಣಾ ಆಯುಕ್ತ ಹಾಗೂ ಚುನಾವಣಾ ಆಯುಕ್ತರ ನೇಮಕ - ಸೇವೆಗಳಿಗೆ ಕುರಿತಾದ ಮಸೂದೆಗೆ ರಾಜ್ಯಸಭೆ ಅಂಗೀಕಾರ ನೀಡಿದೆ. ಈ ಹುದ್ದೆಗಳ ಸ್ಥಾನಮಾನವನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ ಸಮನಾಗಿರಿಸಲು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ಮಸೂದೆಯ ಮೂಲಕ ಚುನಾವಣಾ ಆಯುಕ್ತರ ಕಾರ್ಯನಿರ್ವಹಣೆಯ ವೇಳೆ ಯಾವುದೇ ಕೋರ್ಟ್ ಪ್ರಕರಣದಿಂದ ವಿನಾಯಿತಿ ನೀಡಲಾಗುವುದು.

ಈ ಮಸೂದೆಯ ಮೂಲಕ ಆಯುಕ್ತರ ಅಧಿಕಾರವನ್ನು ಕಾರ್ಯಾಂಗದ ಮಟ್ಟಕ್ಕೆ ಇಳಿಸಲಾಗಿದೆ. ಇದು ಸಂವಿಧಾನದ ಉಲ್ಲಂಘನೆ ಎಂದು ಆರೋಪಿಸಿದ ಪ್ರತಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

# ನಗರದಲ್ಲಿ ಇಂದು ರಾಜ್ಯೋತ್ಸವ

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದಿಂದ ಕನ್ನಡ ರಾಜ್ಯೋತ್ಸವವನ್ನು ಇಂದು ಮಧ್ಯಾಹ್ನ 12.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಉದ್ಘಾಟನೆ : ಪಿ. ಕೃಷ್ಣೇಗೌಡ. ಮುಖ್ಯ ಅತಿಥಿಗಳು : ಡಾ. ಎಂ.ವಿ. ವೆಂಕಟೇಶ್, ಉಮಾ ಪ್ರಶಾಂತ್, ಮಹಾವೀರ ಕರೆಣ್ಣವರ್, ಎಲ್.ಎಚ್. ಅರುಣ್ ಕುಮಾರ್ ಸೇರಿದಂತೆ ಮತ್ತಿತರರು.

# ವಕೀಲರ ಸಂರಕ್ಷಣಾ ಕಾಯ್ದೆ ಜಾರಿ : ಅಭಿನಂದನೆ

ದಾವಣಗೆರೆ, ಡಿ.12- ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಬೆಳಗಾವಿ ಅಧಿವೇಶನದಲ್ಲಿ ಜಾರಿ ಮಾಡಿದ ಸರ್ಕಾರಕ್ಕೆ ಜಿಲ್ಲಾ ಸಾಮಾಜಿಕ ನ್ಯಾಯ ಸಮಿತಿ ಅಭಿನಂದಿಸಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಕೀಲ ಎಸ್.ಪರಮೇಶ್, ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು 6ನೇ ಗ್ಯಾರಂಟಿಯಾಗಿ ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ತರುವುದಾಗಿ ಭರವಸೆ ನೀಡಿದ್ದರು.

ಅದರಂತೆ ಇದೀಗ ಜಾರಿಗೆ ತಂದಿದ್ದಾರೆ ಎಂದು ಹೇಳಿದರು. ವಕೀಲರು ನಿರಂತರವಾಗಿ ಹಲ್ಲೆಗೊಳಲಾಗುತ್ತಿದ್ದರು.

ಈ ಕಾಯ್ದೆಯಿಂದಾಗಿ ವಕೀಲರಿಗೆ ರಕ್ಷಣೆ ಸಿಕ್ಕಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎನ್.ಎಂ. ಆಂಜನೇಯ ಗುರೂಜಿ, ಕೆ.ಕೆ. ರಂಗಸ್ವಾಮಿ, ಬಾಬು ಪಿ. ಗೋಸಾಯಿ ಉಪಸ್ಥಿತರಿದ್ದರು.


# ಕೆ.ಎನ್. ಓಂಕಾರಪ್ಪ ನಿಧನ



ದಾವಣಗೆರೆ ಸಿಟಿ ವಾಸಿ
ಅಧ್ಯಕ್ಷರು, ಚೇತನ ವಿದ್ಯಾಸಂಸ್ಥೆ (ರಿ), ದಾವಣಗೆರೆ
ನಿರ್ದೇಶಕರು, ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ
ಮಾಜಿ ನಿರ್ದೇಶಕರು, ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆ
ಮಾಜಿ ಸೆನೆಟ್ ಸದಸ್ಯರು, ಕುವೆಂಪು ವಿಶ್ವವಿದ್ಯಾನಿಲಯ ಹಾಗೂ
ಭಾರತೀಯ ಜನತಾ ಪಾರ್ಟಿ ಹಿರಿಯ ಮುಖಂಡರಾದ

## ಕೆ.ಎನ್. ಓಂಕಾರಪ್ಪ

ಇವರು, ದಿನಾಂಕ 12.12.2023ರ ತಡರಾತ್ರಿ 12.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 63 ವರ್ಷ ವಯಸ್ಸಾಗಿತ್ತು.
ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.12.2023ರ ಬುಧವಾರ ಮಧ್ಯಾಹ್ನ 2 ಗಂಟೆಗೆ ನಗರದ ಶ್ರೀ ರಾಮನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಚೇತನ್ ಚಕ್ರವರ್ತಿ ಹಾಗೂ ಸಚಿನ್ ಚಕ್ರವರ್ತಿ**
**ಮೊ : 78296 06346, 73383 89447**

## ಆರನೇ ಪುಣ್ಯಸ್ಮರಣೆ



**ದಿ|| ಶ್ರೀಮತಿ ಎಸ್.ಅನುಸೂಯಮ್ಮನವರು**
(ದಿ|| ಡಾ|| ಸದಾಶಿವಪ್ಪನವರ ಧರ್ಮಪತ್ನಿ
ಮಾಲೀಕರು, ಅಶ್ವಿನಿ ನರ್ಸಿಂಗ್ ಹೋಂ)
**ನಿಧನ 13-12-2017**
ನೀವು ನಮ್ಮನ್ನಗಲಿ ಇಂದಿಗೆ 6 ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ

**ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಸುರಹೊನ್ನೆ ಬಂಧು-ಮಿತ್ರರು.**

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ




|| ಶ್ರೀ ಶಿವನಾರದ ಮುನಿ ಪ್ರಸನ್ನ ||
ದಾವಣಗೆರೆ ತಾ. ಪುಟಗನಾಳ್ ಗ್ರಾಮದ ವಾಸಿ
**ದಿ. ಶ್ರೀಮತಿ ಹನುಮಮ್ಮ ದಿ. ರಾಮನಗೌಡ್ರು ಮಗನಾದ**
**ಗೌಡ್ರು ಶ್ರೀ ರೇವಣಸಿದ್ದಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ: 06.12.2023ನೇ ಬುಧವಾರ ಬೆಳಿಗ್ಗೆ 9 ಕ್ಕೆ
ನಮ್ಮ ಪೂಜ್ಯ ಅಣ್ಣನವರಾದ



**ಗೌಡ್ರು ಶ್ರೀ ಓಂಕಾರಪ್ಪನವರು**
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆಯನ್ನು'** ದಿನಾಂಕ:14.12.2023ನೇ **ಗುರುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ. ಪುಟಗನಾಳ್ ಗ್ರಾಮದ ಮೃತರ ಸ್ವಗೃಹದಲ್ಲಿ** ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

**ದುಃಖತಪ್ತರು : ಧರ್ಮಪತ್ನಿ ಗೌಡ್ರು ಶ್ರೀಮತಿ ಅನುಸೂಯಮ್ಮ ಮತ್ತು ಮಕ್ಕಳು, ಮೃತರ ಸಹೋದರರು, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಗೌಡ್ರು ವಂಶಸ್ಥರು, ಪುಟಗನಾಳ್ ಹಾಗೂ ಬಂಧು ಮಿತ್ರರು.**
**ಮೊ : 95356 13563, 74834 91353**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ


# ವಕೀಲರ ರಕ್ಷಣಾ ಕಾಯ್ದೆ ಮಂಡನೆಗೆ ಸ್ವಾಗತ



ದಾವಣಗೆರೆ, ಡಿ.12- ಬೆಳಗಾವಿ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ರಾಜ್ಯ ಸರ್ಕಾರವು ವಕೀಲರ ರಕ್ಷಣಾ ಕಾಯ್ದೆ ಮಂಡಿಸಿರುವುದು ವಕೀಲ ವೃಂದದಲ್ಲಿ ಸಂತಸ ತಂದಿದೆ. ಆದಷ್ಟು ಬೇಗ ಅಧಿವೇಶನದಲ್ಲಿ ಅನುಮೋದನೆಯಾಗಿ ಸಂವಿಧಾನಾತ್ಮಕವಾಗಿ ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ಬರಲಿ ಎಂದು ವಕೀಲರೂ ಆಗಿರುವ ದೂಡಾ ಮಾಜಿ ಅಧ್ಯಕ್ಷ ಪ್ರಕಾಶ್ ಆಶಿಸಿದ್ದಾರೆ. ವಕೀಲರ ರಕ್ಷಣೆಗಾಗಿ ಮಸೂದೆ ಮಂಡಿಸಿರುವ ರಾಜ್ಯ ಸರ್ಕಾರದ ನಡೆಗೆ ಹಾಗೂ ಮೈಸೂರು ವಕೀಲರ ಸಮ್ಮೇಳನದಲ್ಲಿ ಮೂಲತಃ ವಕೀಲರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ವಾಗ್ದಾನ ನೀಡಿದಂತೆ ಮಂಡಿಸಿರುವದನ್ನು ಪ್ರಕಾಶ್ ಸ್ವಾಗತಿಸಿದ್ದಾರೆ.

# ರೈತರಿಗೆ ಬೆಳೆ ಪರಿಹಾರ ನೀಡುವಂತೆ ಆಗ್ರಹಿಸಿ ಮಲೇಬೆನ್ನೂರಿನಲ್ಲಿ ಪ್ರತಿಭಟನೆ



ಮಲೇಬೆನ್ನೂರು, ಡಿ. 12 - ರಾಜ್ಯದಲ್ಲಿ ಮಳೆ ಕೊರತೆಯಿಂದಾಗಿ ರೈತರು ಬೆಳೆ ಬೆಳೆಯದೆ ತತ್ತರಿಸಿ ಹೋಗಿದ್ದು, ಬೆಳೆ ಬೆಳೆಯದ ಮತ್ತು ಬೆಳೆ ಹಾಳಾಗಿರುವ ರೈತರ ಪ್ರತಿ ಎಕರೆಗೆ 35 ಸಾವಿರ ರೂ. ಪರಿಹಾರ ನೀಡುವಂತೆ ರೈತ ಸಂಘದ ರಾಜ್ಯ ಕಾರ್ಯಧ್ಯಕ್ಷ ಬಲ್ಲೂರು ರವಿಕುಮಾರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅವರು ಮಂಗಳವಾರ ಪಟ್ಟಣದ ನೀರಾವರಿ ಇಲಾಖೆಯಿಂದ ನಾಡ ಕಛೇರಿವರೆಗೆ ಪ್ರತಿಭಟನಾ ಮೆರವಣಿಗೆ ಮೂಲಕ ಆಗಮಿಸಿ ಉಪತಹಶೀಲ್ದಾರ್ ಆರ್. ರವಿ ಅವರಿಗೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮನವಿ ಪತ್ರ ಸಲ್ಲಿಸಿ ಮಾತನಾಡಿದರು. 1971ರಿಂದ 2023ರವರೆಗೂ ಬಗರ ಹುಕ್ಕುಂ ಸಾಗುವಳಿ ಮಾಡಿದ ಕಲಂ ನಂ. 50, 53 ಮತ್ತು 57ರ ಅಡಿಯಲ್ಲಿನ ಅರ್ಜಿದಾರರಿಗೆ ಹಾಗೂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಣೆ ಮತ್ತು 94ಸಿ ಅಡಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡವರಿಗೆ ಹಕ್ಕುಪತ್ರ ನೀಡುವಂತೆ ಆಗ್ರಹಿಸಿದರು.

ದೇಶದ 140 ಕೋಟಿ ಜನರಿಗೆ ಆಹಾರ ಉತ್ಪಾದನೆ ಮಾಡಿ ತಮ್ಮ ಜೀವನವನ್ನು ತ್ಯಾಗ ಮಾಡಿರುವ 60 ವರ್ಷ ಮೇಲ್ಪಟ್ಟ ವೃದ್ಧ ರೈತರಿಗೆ 5 ಸಾವಿರ ಪಿಂಚಣಿ ನೀಡುವಂತೆ ಮತ್ತು ರೈತರನ್ನು ಮದುವೆಯಾಗುವ ವಧುವಿಗೆ ಸರ್ಕಾರಿ ಹುದ್ದೆಯಲ್ಲಿ ಶೇ.10ರಷ್ಟು ಉದ್ಯೋಗ ಮೀಸಲು ನೀಡುವಂತೆಯೂ ಬಲ್ಲೂರು ರವಿಕುಮಾರ್ ಈ ವೇಳೆ ಸರ್ಕಾರಕ್ಕೆ ಆಗ್ರಹ ಪಡಿಸಿದರು.

ಇದೇ ತಿಂಗಳು 23ರಂದು ಬೆಂಗಳೂರಿನಲ್ಲಿ ನಡೆಯುವ ರೈತರ ಮಹಾ ಅಧಿವೇಶನಕ್ಕೆ ರೈತರು ಹಾಗೂ ರೈತ ಸಂಘಟನೆಗಳು ಭಾಗವಹಿಸಿವಂತೆ ರೈತರು ಮನವಿ ಮಾಡಿದರು. ರೈತ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಮಂಜುನಾಥ್, ನಂದಿತಾವರೆ ಮುರುಗೇಂದ್ರಯ್ಯ, ಪೂಜಾರ್ ಅಂಜಿನಪ್ಪ, ಮತ್ತಿತರರು ಈ ವೇಳೆ ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಕೈಗಾರಿಕಾ ಉತ್ಪಾದನೆಯಲ್ಲಿ ಶೇ.11.7ರ ಹೆಚ್ಚಳ**
ನವದೆಹಲಿ : ದೇಶದ ಕೈಗಾರಿಕಾ ಉತ್ಪಾದನೆ ಅಕ್ಟೋಬರ್ ತಿಂಗಳಲ್ಲಿ 16 ತಿಂಗಳಲ್ಲೇ ಅತಿ ಹೆಚ್ಚಿನ ಶೇ.11.7ಕ್ಕೆ ತಲುಪಿದೆ. ಉತ್ಪಾದನೆ, ಗಣಿ ಹಾಗೂ ವಿದ್ಯುತ್ ವಲಯಗಳಲ್ಲಿ ಹೆಚ್ಚಿನ ಬೆಳವಣಿಗೆಯಾಗಿದೆ. 2022ರ ಅಕ್ಟೋಬರ್‌ನಲ್ಲಿ ಕೈಗಾರಿಕಾ ವಲಯದಲ್ಲಿ ಶೇ.4.1ರ ಕುಸಿತವಾಗಿತ್ತು.

**ಯು.ಪಿ.ಐ. ಸ್ವಯಂ ಚಾಲಿತ ಪಾವತಿ ಮಿತಿ 1 ಲಕ್ಷ ರೂ.ಗೆ ಹೆಚ್ಚಳ**
ಮುಂಬೈ : ಯು.ಪಿ.ಐ. ಮೂಲಕ ಸ್ವಯಂ ಚಾಲಿತ ಪಾವತಿಯ ಮಿತಿಯನ್ನು ರಿಸರ್ವ್ ಬ್ಯಾಂಕ್ 1 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ. ಪ್ರಸಕ್ತ ಈ ಮಿತಿ 15 ಸಾವಿರ ರೂ. ಆಗಿತ್ತು. ಮ್ಯೂಚ್ಯುಯಲ್ ಫಂಡ್, ವಿಮೆ ಕಂತು ಹಾಗೂ ಕ್ರೆಡಿಟ್ ಕಾರ್ಡ್ ಬಿಲ್‌ಗಳಿಗೆ ಈ ಹೆಚ್ಚಳ ಅನ್ವಯವಾಗಲಿದೆ.

**ಚಿಲ್ಲರೆ ಹಣದುಬ್ಬರ ಶೇ.5.55ಕ್ಕೆ ಏರಿಕೆ**
ನವದೆಹಲಿ : ಚಿಲ್ಲರೆ ಹಣದುಬ್ಬರ ಕಳೆದ ನವೆಂಬರ್ ತಿಂಗಳಲ್ಲಿ ಮೂರು ತಿಂಗಳಲ್ಲೇ ಅತಿ ಹೆಚ್ಚಿನ ಶೇ.5.55ಕ್ಕೆ ತಲುಪಿದೆ. ಆಹಾರ ಹಾಗೂ ತರಕಾರಿಗಳ ಬೆಲೆ ಏರಿಕೆ ಇದಕ್ಕೆ ಪ್ರಮುಖ ಕಾರಣವಾಗಿದೆ. ಕಳೆದ 2022ರ ನವೆಂಬರ್‌ನಲ್ಲಿ ಹಣದುಬ್ಬರ ಶೇ.5.88ರಷ್ಟಿತ್ತು.

**ಎ.ಐ. ಬಳಕೆಗಾಗಿ ಜಾಗತಿಕ ಮಾರ್ಗಸೂಚಿಗೆ ಪ್ರಧಾನಿ ಕರೆ**
ನವದೆಹಲಿ : ಕೃತಕ ಬುದ್ಧಿವಂತಿಕೆ (ಎ.ಐ.) ಬಳಕೆಗಾಗಿ ಜಾಗತಿಕ ಮಾರ್ಗಸೂಚಿ ರೂಪಿಸಬೇಕಿದೆ. ಉಗ್ರರ ಕೈಯಲ್ಲಿ ಈ ತಂತ್ರಜ್ಞಾನ ದುರ್ಬಳಕೆಯಾಗದಂತೆ ತಡೆಯಬೇಕಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**ಗಣರಾಜ್ಯೋತ್ಸವಕ್ಕೆ ಬಿಡನ್ ಬರುವ ಸಾಧ್ಯತೆ ಇಲ್ಲ**
ನವದೆಹಲಿ : ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಅವರು ಮುಂದಿನ ವರ್ಷದ ಗಣರಾಜ್ಯೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ಬರುವ ಸಾಧ್ಯತೆ ಇಲ್ಲ. ಭಾರತ ಹಾಗೂ ಅಮೆರಿಕಗಳು ಮುಂದಿನ ವರ್ಷದ ಆರಂಭದ ಬದಲು, ನಂತರದಲ್ಲಿ ಕ್ವಾಡ್ ಶೃಂಗಸಭೆ ನಡೆಸಲು ಉದ್ದೇಶಿಸಿವೆ ಎಂದು ಈ ಬೆಳವಣಿಗೆಯ ಮಾಹಿತಿ ಹೊಂದಿರುವವರು ತಿಳಿಸಿದ್ದಾರೆ.

**ಅಮೆರಿಕದಿಂದ ರೈಫಲ್‌ಗಳ ಖರೀದಿಸಲು ರಕ್ಷಣಾ ಸಚಿವಾಲಯ ಸಮ್ಮತಿ**
ನವದೆಹಲಿ : ಅಮೆರಿಕದಿಂದ 73 ಸಾವಿರ ಎಸ್.ಐ.ಜಿ. ಸ್ಯೂವರ್ ರೈಫಲ್‌ಗಳನ್ನು ಖರೀದಿಸುವ ಸೈನ್ಯದ ಪ್ರಸ್ತಾಪಕ್ಕೆ ರಕ್ಷಣಾ ಸಚಿವಾಲಯ ಒಪ್ಪಿಗೆ ನೀಡಿದೆ. ಇವುಗಳ ವೆಚ್ಚ 840 ಕೋಟಿ ರೂ. ಆಗಲಿದೆ.

**ಬೆಂಬಲ ಕಳೆದುಕೊಳ್ಳುತ್ತಿರುವ ಇಸ್ರೇಲ್ : ಅಮೆರಿಕ**
ವಾಷಿಂಗ್ಟನ್ : ಗಾಜಾ ಮೇಲೆ ನಡೆಸಿದ ವಿವೇಚನಾ ರಹಿತ ದಾಳಿಯಿಂದಾಗಿ ಇಸ್ರೇಲ್ ಬೆಂಬಲ ಕಳೆದುಕೊಳ್ಳುತ್ತಿದೆ ಎಂದು ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಹೇಳಿದ್ದಾರೆ. ಇಸ್ರೇಲ್‌ನ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಅವರು ತಮ್ಮ ಸರ್ಕಾರ ಬದಲಿಸಿಕೊಳ್ಳಬೇಕು ಎಂದೂ ಅವರು ತಿಳಿಸಿದ್ದಾರೆ.

# ಆಯುಷ್ ಆಸ್ಪತ್ರೆಗಳಲ್ಲಿ ಒಳ ರೋಗಿಗಳ ದಾಖಲಾತಿಗೆ ಕ್ರಮ

ಬೆಳಗಾವಿ, ಡಿ. 11 - ಆಯುಷ್ ಆಸ್ಪತ್ರೆಗಳಲ್ಲಿ ಒಳರೋಗಿಗಳ ದಾಖಲಾತಿ ವ್ಯವಸ್ಥೆ ಸೇರಿದಂತೆ, ಎಲ್ಲಾ ಸೂಕ್ತ ಮೇಲ್ವಿಚಾರಣೆ ಮಾಡಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಪಿ.ಎಚ್.ಪೂಜಾರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿರುವ 80 ಆಸ್ಪತ್ರೆಗಳಲ್ಲಿ ಈಗಾಗಲೇ 55 ಆಯುಷ್ ಆಸ್ಪತ್ರೆಗಳಲ್ಲಿ ಒಳರೋಗಿಗಳ ದಾಖಲಾತಿ ಪ್ರಾರಂಭಿಸಲಾಗಿದ್ದು, ಉಳಿದ 25 ಆಯುಷ್ ಆಸ್ಪತ್ರೆಗಳಲ್ಲಿ ಒಳ ರೋಗಿಗಳ ದಾಖಲಾತಿಯನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಆಯಷ್ ಅಧಿಕಾರಿಗಳ ಪ್ರತಿ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರತಿ ಆಸ್ಪತ್ರೆಗಳ ಒಳರೋಗಿಗಳ ದಾಖಲಾತಿ ಪ್ರಾರಂಭಿಸಲು ಸೂಚಿಸ ಲಾಗಿದೆ. ಆಯುಷ್ ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವಲ್ಲಿ ಕೊರತೆ ಇರುವ ಕಡೆ ಗಮನ ಹರಿಸಿ ಔಷಧಿ ಖರೀದಿ, ಸಿಬ್ಬಂದಿ ನೇಮಕ ಮತ್ತು ಆಯುಷ್ ತಜ್ಞ ವೈದ್ಯರ ನೇಮಕಕ್ಕೆ ಒತ್ತು ಕೊಡಲಾಗುತ್ತಿದೆ.

ಕೇಂದ್ರ ಸರ್ಕಾರವು ಆಯುಷ್ ಆಸ್ಪತ್ರೆಗಳಿಗೆ ಔಷಧಿ, ಸಲಕರಣೆ ಮತ್ತು ಉಪಕರಣಕ್ಕೆ ನೀಡಿದ ಅನುದಾನದ ಸದ್ಬಳಕೆ ಮಾಡಲಾಗುತ್ತಿದೆ. ಎರಡು ತಿಂಗಳೊಳಗೆ ಅವಶ್ಯವಿರುವ ಸಿಬ್ಬಂದಿ ನೇಮಕಕ್ಕೆ ಕ್ರಮ ವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

# ಸಿದ್ದಾರೂಢರು ಭಗವಂತನ ಪರಿಪೂರ್ಣ ಅವತಾರ

ಮಲೇಬೆನ್ನೂರು, ಡಿ.12- ಸಿದ್ದಾರೂಢರು ಭಗವಂತನ ಪರಿಪೂರ್ಣ ಅವತಾರವಾಗಿದ್ದು, ಸಿದ್ದಾರೂಢರು ಅವತರಿಸಿದ ಅವತಾರಗಳನ್ನು ಬೇರೆ ಯಾರೂ ಅವತರಿಸಿಲ್ಲ ಎಂದು ಪ್ರವಚನಕಾರ ಹೊಳೆಸಿರಿಗೆರೆಯ ಡಿ.ಸಿದ್ದೇಶ್ ಹೇಳಿದರು.

ಅವರು, ಮಂಗಳವಾರ ಯಲವಟ್ಟಿಯ ಶ್ರೀ ಗುರುಸಿದ್ಧಾಶ್ರಮದಲ್ಲಿ ಹಮ್ಮಿಕೊಂಡಿದ್ದ ಅಮಾವಾಸ್ಯೆ ಸತ್ಸಂಗ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ದೃಢವಾದ ಶ್ರದ್ಧೆ, ನಂಬಿಕೆ, ವಿಶ್ವಾಸ ಇದ್ದಲ್ಲಿ ಮಾತ್ರ ಭಗವಂತ ಒಲಿಯುತ್ತಾನೆ. ಅಂತಹ ಎಲ್ಲಾ ಶಕ್ತಿಗಳನ್ನು ಸಿದ್ದಾರೂಢರು ಹೊಂದಿದ್ದರು. ಹಾಗಾಗಿ ಅವರಿಗೆ ಭಗವಂತ ಒಲಿದನು. ಸತ್ಸಂಗ, ಭಜನೆಗೂ ಭಗವಂತನನ್ನು ಆಕರ್ಷಿಸುವ ಶಕ್ತಿ ಇದೆ ಎಂದು ಸಿದ್ದೇಶ್ ಹೇಳಿದರು.

ಹುಣಸೇಕಟ್ಟೆಯ ಶ್ರೀ ಸಿದ್ದಾರೂಢ ಆಶ್ರಮದ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ ಮಾತನಾಡಿ, ವಿಜ್ಞಾನದಿಂದ ಸುಖಕ್ಕಿಂತ ತೊಂದರೆಯೇ ಹೆಚ್ಚಾಗಿದೆ. ಅಜ್ಞಾನದಲ್ಲಿರುವವರನ್ನು ಸುಜ್ಞಾನದೆಡೆಗೆ ಕರೆ ತರುವ ಶಕ್ತಿ ಸತ್ಸಂಗಕ್ಕಿದೆ ಎಂದರು.

ತನುವನ್ನು ದಂಡಿಸಲು ಸಾಧ್ಯವಿಲ್ಲ. ಹಾಗಾಗಿ ಮಹಾಶಕ್ತಿ ಇರುವ ಧ್ಯಾನ, ಸತ್ಸಂಗವನ್ನು ಅಳವಡಿಸಿ ಕೊಳ್ಳಿ ಎಂದು ಸ್ವಾಮೀಜಿ ಭಕ್ತರಿಗೆ ತಿಳಿಸಿದರು.

ಗುರುನಾಥ ಮಸಲಾಪುರ ಮಾತನಾಡಿ, ನಿಜವಾದ ಭಕ್ತಿಗೆ ಮಾತ್ರ ಗುರುದೇವ ಒಲಿಯುತ್ತಾನೆ ಎಂದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಯೋಗಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಧಾರಾವಾಹಿಗಳನ್ನು ನೋಡುವುದರಿಂದ ಆ ಕ್ಷಣಕ್ಕೆ ಮಾತ್ರ ನಿಮಗೆ ಖುಷಿ ಸಿಗಬಹುದು. ಆದರೆ, ನಿಮ್ಮನ್ನು ನೀವು ಪ್ರೀತಿಸುವುದರಿಂದ, ಅರ್ಪಿಸಿಕೊಳ್ಳು ವುದರಿಂದ ಸದಾ ಖುಷಿ, ತೃಪ್ತಿ ಸಿಗುತ್ತದೆ.



## ಯಲವಟ್ಟಿಯಲ್ಲಿನ ಸತ್ಸಂಗದಲ್ಲಿ ಪ್ರವಚನಕಾರ ಸಿರಿಗೆರೆ ಸಿದ್ದೇಶ್ ಅಭಿಮತ


ಸಿದ್ದಾರೂಢರಲ್ಲಿ ಭಕ್ತಿ ಹೊಂದಿದವರು ನಿಜವಾದ ಪುಣ್ಯವಂತರು, 'ಸಿದ್ದಾರೂಢರ ಜೋಳಿಗೆ ಊರಿಗೆಲ್ಲಾ ಹೋಳಿಗೆ', 'ಸಿದ್ದಾರೂಢರ ಅಂಗಾರ ಜಗತ್ತಿಗೆಲ್ಲ ಬಂಗಾರ' ಎಂಬ ಮಾತು ಎಂದಿಗೂ ಸತ್ಯ ಎಂದರು.

ಸರ್ಕಾರದಿಂದ 'ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ' ಪಡೆದಿರುವ ಯಲವಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಅಭಿನಂದಿಸಿದ ಶ್ರೀಗಳು, ಸಂಘದ ಸಿಇಓ ಶೇಖರಪ್ಪ ಮತ್ತು ನಾಗರಾಜ್ ಅವರನ್ನು ಮತ್ತು 'ಡಾ. ಬಿ.ಆರ್.ಅಂಬೇಡ್ಕರ್ ಸದ್ಭಾವನಾ ಪ್ರಶಸ್ತಿ' ಪಡೆದಿರುವ 'ಜನತಾವಾಣಿ' ಪತ್ರಕರ್ತ ಜಿಗಳಿ ಪ್ರಕಾಶ್ ಅವರನ್ನೂ ಸನ್ಮಾನಿಸಿ, ಗೌರವಿಸಿದರು.

ಯಲವಟ್ಟಿ ಗ್ರಾ.ಪಂ. ಮಾಜಿ ಸದಸ್ಯ ಹೊಸಮನಿ ಮಲ್ಲಪ್ಪ ಅವರು ಈ ದಿನದ ದಾಸೋಹ ದಾನಿಗಳಾಗಿದ್ದರು.

ನಿವೃತ್ತ ಶಿಕ್ಷಕ ಜಿ.ಬಸಪ್ಪ ಮೇಷ್ಟ್ರು, ನಿವೃತ್ತ ಯೋಧ ಶಿವಕುಮಾರ್, ಯೋಧ ಆನಂದಯ್ಯ, ಗ್ರಾಮದ ಎ.ಸುರೇಶ್, ಡಿ.ರಾಜಪ್ಪ, ಕೆ.ಮಂಜಪ್ಪ, ವೈ.ಸುರೇಶ್ ಶ್ರೇಷ್ಠಿ, ಡಿ.ಚನ್ನವೀರಪ್ಪ, ಎ.ಜಗದೀಶ್, ಹಲಸಬಾಳು ರಾಜು, ಎಂ.ಜಯ್ಯಣ್ಣ, ಕುಂಬಳೂರಿನ ಎಂ. ವಾಸುದೇವಮೂರ್ತಿ, ಕೆ.ಕುಬೇರಪ್ಪ, ಹೆಚ್.ಎಂ. ಸದಾಶಿವ, ಸಿರಿಗೆರೆಯ ಮಾಗೋಡ್ ಈಶ್ವರಪ್ಪ, ರೇವಣಸಿದ್ದಯ್ಯ, ಹನುಮಂತಗೌಡ, ಜಿಗಳಿಯ ಕೆ. ಎಸ್.ಮಾಲತೇಶ್, ರಂಗಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಅಕ್ರಮ ಕಲ್ಲು ಗಣಿಗಾರಿಕೆದಾರರಿಂದ 6 ಸಾವಿರ ಕೋಟಿ ರೂ. ದಂಡ ಬಾಕಿ



ಬೆಳಗಾವಿ, ಡಿ. 12 - ಅಕ್ರಮ ಕಲ್ಲು ಗಣಿಗಾರಿಕೆದಾರರಿಂದ ಆರು ಸಾವಿರ ಕೋಟಿ ರೂ. ದಂಡ ಬಾಕಿ ಉಳಿದಿದೆ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ನಾರಾಯಣಸ್ವಾಮಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯಾ ದ್ಯಂತ ಬಹುತೇಕ ಕಲ್ಲು ಗಣಿಗಾರಿಕೆಗಳು ನಿಯಮ ಮೀರಿ ಕಾರ್ಯನಿರ್ವಹಿಸುತ್ತಿವೆ ಎಂದರು.

ಗಣಿಗಾರಿಕೆಗೆ ಪಾರದರ್ಶಕ ಕಾನೂನು ತರಲು ಸರ್ಕಾರ ಮುಂದಾಗಿರುವುದಲ್ಲದೆ, ಬೃಹತ್ ಬಾಕಿ ಮೊತ್ತವನ್ನು ವಸೂಲಿ ಮಾಡುವುದಾಗಿಯೂ ತಿಳಿಸಿದರು.

ಕಳೆದ ಮೂರು ವರ್ಷಗಳಲ್ಲಿ ಅಧಿಕೃತ ಪರವಾನಗಿ ಇಲ್ಲದೆ ಕಲ್ಲು ಸಾಗಣೆ ಮಾಡಿದ ಆರೋಪದ ಮೇಲೆ 485 ಪ್ರಕರಣಗಳನ್ನು ದಾಖಲಿಸಿದ್ದು, 2060 ಕೋಟಿ ರೂ. ದಂಡ ವಿಧಿಸಲಾಗಿದೆ ಎಂದು ಹೇಳಿದರು.

ಹಿಂದಿನ ಸರ್ಕಾರಗಳು ಜನರಿಗೆ ಜಲ್ಲಿ ಮತ್ತು ಕಲ್ಲುಗಳು ಅಗತ್ಯ ಇದೆ ಎಂಬ ಕಾರಣಕ್ಕೆ ದಂಡ ವಸೂಲಿಗೆ ಕಠಿಣ ಕ್ರಮ ತೆಗೆದುಕೊಂಡಿರಲಿಲ್ಲ.

ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿಯವರೂ ಸಹ ಜನರ ಅವಶ್ಯಕತೆಗೆ ತಕ್ಕಂತೆ ಕಲ್ಲು ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟಿದ್ದರು. ಆದರೆ, ಕಾಂಗ್ರೆಸ್ ಸರ್ಕಾರ ಇಂತಹ ಬಾಕಿ ಹಣ ವಸೂಲಾತಿಗೆ ಕ್ರಮ ತೆಗೆದುಕೊಳ್ಳುವ ಸಂಬಂಧ ಈವರೆಗೆ ಎರಡು ಬಾರಿ ಕ್ಯಾಬಿನೆಟ್ ಉಪಸಮಿತಿ ಸಭೆ ನಡೆಸಿ ಚರ್ಚಿಸಿದೆ ಎಂದು ಹೇಳಿದರು.

ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿರುವವರಿಗೆ ಒಂದು ಬಾರಿಗೆ ಅನ್ವಯವಾಗುವಂತೆ ರಿಯಾಯಿತಿ ನೀಡುವ ಬಗ್ಗೆ ಸದನದಲ್ಲೇ ಚರ್ಚಿಸಲಾಗಿದೆ.

ಪರವಾನಗಿ ಪಡೆದ ಕ್ವಾರಿ ಜಾಗದಲ್ಲಿ ಗಣಿಗಾರಿಕೆ ನಡೆಸಿದರೆ 1:1 ರ ಅನುಪಾತ ಹಾಗೂ ಪರವಾನಗಿ ಪ್ರದೇಶ ಮೀರಿ ಒತ್ತುವರಿ ಜಾಗದಲ್ಲಿ ಗಣಿಗಾರಿಕೆ ನಡೆಸಿದ್ದರೆ 1:2ರ ಅನುಪಾತದಲ್ಲಿ ದಂಡ ವಿಧಿಸುವ ತೀರ್ಮಾನ ತೆಗೆದುಕೊಳ್ಳಲಾಗಿದೆ. ಆದರೆ, ಈವರೆಗೆ ದಂಡ ವಸೂಲಿಯಾಗಿಲ್ಲ. ಮುಂದಿನ ತಿಂಗಳು ಮತ್ತೊಂದು ಸಭೆ ನಡೆಸಿ ದಂಡ ವಸೂಲಾತಿ ಹಾಗೂ ಗಣಿಗಾರಿಕೆಗಳನ್ನು ಕಾನೂನು ಪಾರದರ್ಶಕತೆಯ ಅಡಿಯಲ್ಲಿ ತರಲು ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಸಚಿವ ಕೃಷ್ಣ ಭೈರೇಗೌಡ ಅವರು ತಿಳಿಸಿದರು.

# ಹೊರೆ ಏರಿಕೆ, ಸಿಬ್ಬಂದಿ ಕೊರತೆ

**(1ನೇ ಪುಟದಿಂದ)** ಕಚೇರಿ ಇಲ್ಲ. ತಾಲ್ಲೂಕಾದರೂ ಹಿಂದಿನಂತೆಯೋ ಪರಿಸ್ಥಿತಿ ಮುಂದುವರೆದಿದೆ.

ಡಿ ದರ್ಜೆ ಉದ್ಯೋಗಿಗಳ ಕೊರತೆ ಇರುವುದರಿಂದ, ಕೆಲವು ಕೇಂದ್ರಗಳಲ್ಲಿ ವೈದ್ಯರೇ ಕಸಬರಿಗೆ ಹಿಡಿಯುವ ಪರಿಸ್ಥಿತಿ ಬಂದಿದೆ. ಕಸ ಹೊಡೆಯುವವರೂ ಅವರೇ, ಚಿಕಿತ್ಸೆ ನೀಡುವವರೂ ಅವರೇ, ಸೆಗಣಿ ಬಾಚುವವರೂ ಅವರೇ ಎಂಬಲ್ಲಿಗೆ ಪರಿಸ್ಥಿತಿ ಬಂದಿದೆ.

ಈ ನಡುವೆ, ಇಲಾಖೆಗೆ ಬರುವ ಅನುದಾನವೂ ಸಮರ್ಪಕವಾಗಿಲ್ಲ. ಜಾನುವಾರುಗಳಿಗೆ ಹೋಲಿಸಿದರೆ ಸರಾಸರಿ 10-15 ರೂ. ಅನುದಾನ ಮಾತ್ರ ಬರುತ್ತಿದೆ. ಚಿಕಿತ್ಸೆ ನೀಡಲು ಇದು ಸಾಲದಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಇತ್ತೀಚಿನ ದಿನಗಳಲ್ಲಿ ಪಶು ವೈದ್ಯ ಸಂಸ್ಥೆಗಳಿಗೆ ಔಷಧ ಪೂರೈಕೆ ಅಸಮರ್ಪಕವಾಗಿದೆ. ಇದರಿಂದಾಗಿ ರಾಸುಗಳ ಚಿಕಿತ್ಸೆಗೆ ಔಷಧಿ ಕೊರತೆಯಾಗಿದೆ. ಇದರಿಂದಾಗಿ ಸಾರ್ವಜನಿಕರು ಹಾಗೂ ಜನಪ್ರತಿನಿಧಿ ಗಳಿಂದ ಪಶು ವೈದ್ಯರು ನಿರಂತರವಾಗಿ ಆಕ್ಷೇಪಣೆಗೆ ಗುರಿಯಾಗಬೇಕಾಗಿದೆ.

ಪಶು ಪಾಲನೆ ರೈತರಿಗೆ ಪ್ರಮುಖ ಆದಾಯದ ಮೂಲವಾಗಿದೆ. ಸಮರ್ಪಕವಾಗಿ ಜಾನುವಾರುಗಳಿಗೆ ಚಿಕಿತ್ಸೆ ದೊರೆತಲ್ಲಿ ರೈತರಿಗೆ ಹಾಗೂ ಗ್ರಾಮೀಣರ ಆದಾಯಕ್ಕೂ ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಿಬ್ಬಂದಿ ಕೊರತೆ ಬಗೆಹರಿಸುವತ್ತ ಸರ್ಕಾರ ಗಮನ ಹರಿಸಬೇಕಿದೆ.

# ಜಾತಿ ಗಣತಿ ವಿರೋಧಿಸಿಲ್ಲ

**(1ನೇ ಪುಟದಿಂದ)** ನಮ್ಮ ಸಾಕಷ್ಟು ಶಾಸಕರು ಹಾಗೂ ಸಾಕಷ್ಟು ಸಚಿವರು ಸೂಕ್ತ ಗಣತಿಯ ಪರ ಇದ್ದೇವೆ. ಏಕೆಂದರೆ ಗಣತಿಯನ್ನು ವ್ಯವಸ್ಥಿತವಾಗಿ ಮಾಡಬೇಕಾಗುತ್ತದೆ ಎಂದರು. ಗಣತಿಯಾದ ನಂತರ ಜನರಿಗೆ ಸೂಕ್ತ ಪ್ರಮಾಣದಲ್ಲಿ ಹಕ್ಕುಗಳು ದೊರೆಯುತ್ತವೆ. ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನಸಂಖ್ಯೆ ಆಧಾರದ ಮೇಲೆ ಅನುದಾನ ಹಂಚುವ ಕಾನೂನು ರೂಪಿಸಿದ್ದೇವೆ. ಹೀಗಾಗಿ ನಾವು ಸೂಕ್ತ, ವೈಜ್ಞಾನಿಕ ಗಣತಿ ಬಯಸುತ್ತಿದ್ದೇವೆ ಎಂದು ಶಿವಕುಮಾರ್ ಹೇಳಿದರು.

# ಪಕ್ಷದಿಂದ ಬೇಡುವ ಬದಲು, ಸಾಯುವುದೇ ಮೇಲು : ಚೌಹಾಣ್

ಭೂಪಾಲ್, ಡಿ. 12 – ಸ್ವಂತಕ್ಕಾಗಿ ಪಕ್ಷದಿಂದ ಬೇಡುವ ಬದಲು, ಸಾಯುವುದೇ ಮೇಲು ಎಂದು ಮಧ್ಯ ಪ್ರದೇಶದ ನಿರ್ಗಮಿತ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದ ನಂತರ, ಮೋಹನ್ ಯಾದವ್ ಅವರನ್ನು ಮುಖ್ಯಮಂತ್ರಿಯಾಗಿ ನೇಮಿಸಲಾಗಿತ್ತು. ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಚೌಹಾಣ್, ಬಿಜೆಪಿ ಏನೇ ಹೊಣೆಗಾರಿಕೆ ನೀಡಿದರೂ ನಿಭಾಯಿಸುತ್ತೇನೆ ಎಂದಿದ್ದಾರೆ. ನಾನು ದೆಹಲಿಗೆ ಹೋಗಿ ನನಗಾಗಿ ಏನಾದರೂ ಕೇಳುವುದಕ್ಕಿಂತ ಸಾಯುವುದನ್ನೇ ಬಯಸುತ್ತೇನೆ ಎಂದು ವಿನಯವಾಗಿ ಹೇಳಲು ಬಯಸುತ್ತೇನೆ ಎಂದು ಚೌಹಾಣ್ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ವ್ಯಕ್ತಿಯೋರ್ವ ಸ್ವಾರ್ಥಿಯಾಗಿದ್ದಾಗ, ಆತ ತನಗಾಗಿ ಯೋಚಿಸುತ್ತಾನೆ. ಆದರೆ, ಬಿಜೆಪಿ ಒಂದು ಅಭಿಯಾನವಾಗಿದೆ, ಪ್ರತಿಯೊಬ್ಬ ಕಾರ್ಯಕರ್ತನಿಗೂ ಏನಾದರೂ ಕೆಲಸ ಇದ್ದೇ ಇರುತ್ತದೆ. ನನಗೆ ನೀಡಲಾಗುವ ಯಾವುದೇ ಕೆಲಸವಾದರೂ ಮಾಡುತ್ತೇನೆ ಎಂದು 64 ವರ್ಷದ ಚೌಹಾಣ್ ಹೇಳಿದ್ದಾರೆ.

# ಬೇಸಿಗೆ ಕೃಷಿಗೆ ಅನುಭವದ ಮಾತು

ದಾವಣಗೆರೆ, ಡಿ.12- ಬೇಸಿಗೆ ಕೃಷಿ ಬೆಳೆಗಳ ಕುರಿತು ಅನುಭವದ ಮಾತುಗಳನ್ನು ರೈತರೊಂದಿಗೆ ವರದಾ ಕೃಷಿಕರ ವೇದಿಕೆ ಹಂಚಿಕೊಂಡಿದೆ

ಜೋಳ, ಗೋವಿನಜೋಳ ಬಿತ್ತನೆ ತಕ್ಷಣ ಮಾಡಿ. ತಡವಾದರೆ, ಇಳುವರಿಯಲ್ಲಿ ಗಣನೀಯ ಇಳಿಕೆ ಸಂಭವ.

ಸೋಯಾ ಅವರೆ, ಶೇಂಗಾ ಬಿತ್ತನೆ ಮುಂದುವರೆಸಿದರೂ ಸಹ ಉತ್ತಮ ಇಳುವರಿ ಬರುವ ಸಂಭವ ಕಡಿಮೆ. ಹೆಸರು, ಅಲಸಂದೆ, ಉದ್ದು ಬಿತ್ತಬಹುದು. ಬೀಜೋಪಚಾರ ಮಾಡಿಯೇ ಸಾಲು ಬಿತ್ತನೆ ಮಾಡಬೇಕು. ಅಲಸಂದೆ, (ಉದ್ದು ಕನಿಷ್ಟ 18", ಹೆಸರು 12" ). ಕೊತ್ತಂಬರಿ, ಸಾಸುವೆ, ಅಗಸೆ ಸಿಡಿಗಾಳಾಗಿ ಬಿತ್ತುವುದು ಉತ್ತಮ. ಈ ಬೆಳೆಗಳನ್ನು ಮೇವಿನ ಜೋಳ / ಮೆಕ್ಕೆಜೋಳ ದೊಂದಿಗೆ 4-6:2 ಪ್ರಮಾಣದಲ್ಲಿ ಅಕ್ಕಡಿಯಾಗಿ ಬೆಳೆಯಬಹುದು. ಅಕ್ಕಡಿ, ಸಿಡಿಗಾಳು ಬೆಳೆಗಳಿಗೆ ಸಹ ಬೀಜೋಪಚಾರ ಅತ್ಯಗತ್ಯ. ಬಿತ್ತಿದ 12-14 ದಿನಗಳಲ್ಲಿ ಎಡೆ ಹೊಡೆಯುವುದು, ಬೋದು ಏರಿಸುವುದು, ಪೋಷಕಾಂಶ ಸಿಂಪಡಣೆ, ಸಕಾಲದಲ್ಲಿ ಸಸ್ಯ ಸಂರಕ್ಷಣೆ ಅತ್ಯಗತ್ಯ.ನಿರ್ದಿಷ್ಟ ಮಾಹಿತಿಗಾಗಿ ಸ್ಪಂದನೆ ನಿರೀಕ್ಷಿಸಲಾಗಿದೆ.

# ವಿಶ್ವಕ್ಕೆ ಭಾರತೀಯ ಯೋಗದ ಕೊಡುಗೆ ಅಪಾರ



## ರಾಘವೇಂದ್ರ ಗುರೂಜಿ

ದಾವಣಗೆರೆ, ಡಿ. 12- ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಯೋಗ ಕಲೆ ಪ್ರಮುಖ ಪಾತ್ರ ವಹಿಸಿದೆ. ಯೋಗಕ್ಕೆ ಐದು ಸಾವಿರ ವರ್ಷಗಳ ಇತಿಹಾಸವಿದೆ. ವಿಶ್ವಕ್ಕೆ ಭಾರತದ ಯೋಗ ಅತ್ಯದ್ಭುತ ಕೊಡುಗೆ ನೀಡಿದೆ ಎಂದು ಆದರ್ಶ ಯೋಗ ಪ್ರತಿಷ್ಠಾನದ ಸಂಸ್ಥಾಪಕ ರಾಘವೇಂದ್ರ ಗುರೂಜಿ ಹೇಳಿದರು.

ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಮೊನ್ನೆ ಆಯೋಜಿಸಿದ್ದ ವಿವೇಕ್ ಪೋಷಕರ ಕಾರ್ಯಾಗಾರದಲ್ಲಿ 'ಕಾಡುವ ಬೆನ್ನು ನೋವು- ಇದಕ್ಕಿದೆ ಯೋಗದಲ್ಲಿ ಮದ್ದು ' ವಿಷಯ ಕುರಿತು ಅವರು ಮಾತನಾಡಿದರು.

ಯೋಗ ಭಾರತದ ಅತ್ಯಂತ ಪ್ರಾಚೀನವಾದ, ಅದ್ಭುತವಾದ ಜೀವನ ಕಲೆ. ಮನಸ್ಸನ್ನು ಹತೋಟಿಗೆ ತರುವ ಮೂಲಕ ಸಮಚಿತ್ತತೆ ಕಾಪಾಡುವುದು ಯೋಗದ ಮೂಲ ಉದ್ದೇಶ ವಾಗಿದ್ದು, ಮನಸ್ಸನ್ನು ಸುಂದರಗೊಳಿಸುವುದು ಯೋಗದ ಕ್ರಿಯೆ ಎಂದರು.

ಭಾರತ ಆರೋಗ್ಯಪೂರ್ಣವಾಗಿದೆಯೇ? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ನಮ್ಮದು ಒತ್ತಡ, ಅವಸರದ ಬದುಕು. ಏನೇನೋ ಗಳಿಸಿ, ಕ್ರೋಢೀಕರಿಸಲು ಹೋಗಿ ದೇಹವನ್ನು ಕಾಯಿಲೆಯ ಗೂಡನ್ನಾಗಿಸಿಕೊಂಡಿದ್ದೇವೆ. ಶೇ. 85 ರಷ್ಟು ಜನ ಬೆನ್ನು ನೋವಿನಿಂದ ಬಳಲುತ್ತಿದ್ದು, ಶಾಲೆಗೆ ಹೋಗುವ ಮಕ್ಕಳೂ ಸಹ ಬೆನ್ನು ನೋವಿಗೆ ತುತ್ತಾಗಿದ್ದಾರೆ ಎಂದು ಹೇಳಿದರು.

ಬೆನ್ನಿನ ಬಗ್ಗೆ ಅರಿವು ಅಗತ್ಯ. ಇಡೀ ಶರೀರಕ್ಕೆ ಬೆನ್ನು ಆಧಾರಸ್ತಂಭ. ಬೆನ್ನು ಮೂಳೆಗಳು ನಾವು ಬಾಗಿಸಿದಂತೆಲ್ಲಾ ಬಾಗುತ್ತವೆ. ನಾವು ನೀಡುವ ಒತ್ತಡವನ್ನು ನೋವಿನ ಅನುಭವದ ಮೂಲಕ ಹೊರ ಹಾಕುತ್ತವೆ. ಇದೇ ನಾವು ಮಾಡಿಕೊಳ್ಳುವ ಸ್ವಯಂಕೃತ ಅಪರಾಧ ಎಂದರು.

ನಮ್ಮ ಶರೀರದಲ್ಲಿ ಒತ್ತಡ ಉಂಟಾದಾಗ ಬೆನ್ನು ಮೂಳೆಗಳು ಒಂದಕ್ಕೊಂದು ತಾಕಿ ನೋವು ಕಾಣಿಸಿಕೊಳ್ಳುತ್ತದೆ. ಇದು ಕಾಯಿಲೆ ಅಲ್ಲ. ಸ್ವಯಂಕೃತ ಅಪರಾಧದಿಂದ ಬಂದ ತೊಂದರೆ. ಇದಕ್ಕೆ ಯೋಗದಲ್ಲಿ ಮಾತ್ರ ಪರಿಹಾರವಿದೆ. ಯೋಗ ಚಿಕಿತ್ಸೆಯಲ್ಲಿ ಉತ್ತಮ ಮದ್ದಿದೆ ಎಂದು ಹೇಳಿದರು.

ಬೆನ್ನು ಮುಖ್ಯವಾದ ಅಂಗ. ಅದಕ್ಕೆ ಕುಳಿತುಕೊಳ್ಳುವ ಭಂಗಿ ಮುಖ್ಯ. ನೆಲದ ಮೇಲೆ ಕುಳಿತುಕೊಳ್ಳುವಾಗ ಮಣೆ ಬಳಕೆ ಮುಖ್ಯ. ವ್ಯಕ್ತಿಗತವಾಗಿ ಕಲಿತದ್ದನ್ನು ಸಮಾಜಕ್ಕೆ ಕೊಡುತ್ತೇವೆ. ಈ ಸಂಸ್ಕಾರ ಭಾರತದಲ್ಲಿ ಮಾತ್ರ ಸಾಧ್ಯ. ಮಲಗುವಾಗ ಭುಜ ಮತ್ತು ಕುತ್ತಿಗೆ ನಡುವೆ ಗ್ಯಾಪ್ ಇರಬಾರದು. ದಿಂಬು ಇಲ್ಲದಂತೆ ಮಲಗುವ ಕ್ರಮ ಉತ್ತಮ. ಹೊಕ್ಕಳ ಬಳಿ ಮಂಡಿ ಬರಬೇಕು. ನಿಲ್ಲುವುದು, ಕುಳಿತುಕೊಳ್ಳುವ ಹಾಗೂ ಮಲಗುವ ಕ್ರಮ ಉತ್ತಮ ಎಂದು ಮಾಹಿತಿ ನೀಡಿದರು.

ಕೊನೆ ಹಂತದಲ್ಲಿ ಯೋಗದ ಮೊರೆ ಹೋಗುತ್ತಾರೆ. ಅದರ ಬದಲು ನೋವು ಕಾಣಿಸಿಕೊಂಡ ತಕ್ಷಣ ಯೋಗಕ್ಕೆ ಬರುವುದು ಸೂಕ್ತ ಎಂದು ತಿಳಿಸಿದರು.

ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಜಿ. ಗುರುಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಕ್ಕಳ ವಿಭಾಗದ ಮುಖ್ಯಸ್ಥ ಡಾ. ಮೂಗನಗೌಡ, ಮಕ್ಕಳ ತಜ್ಞರಾದ ಡಾ. ಕೌಜಲಗಿ, ಡಾ. ಮೃತ್ಯುಂಜಯ, ಡಾ. ಮಧು ಪೂಜಾರ್, ಡಾ. ನವೀನ್ ನಾಡಿಗ್, ಸಿಬ್ಬಂದಿಗಳಾದ ಸಿ.ಎಂ. ಅಂಜಲಿ, ಸಂಜೀವ್, ಮಂಜುನಾಥ್, ಗೋವಿಂದ್, ಮತ್ತಿತರರು ಉಪಸ್ಥಿತರಿದ್ದರು.


ಬಾಪೂಜಿ ವಿದ್ಯಾ ಸಂಸ್ಥೆ(ರಿ)

**ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ-577004**

**ಸೆಕ್ಯುರಿಟಿ ಟೆಂಡರ್ ಪ್ರಕಟಣೆ**

ಈ ಮೂಲಕ ತಿಳಿಯಪಡಿಸುವುದೇನೆಂದರೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ, ಇಲ್ಲಿ ಭದ್ರತಾ ಸಿಬ್ಬಂದಿ ನಿಯೋಜಿಸುವ ಬಗ್ಗೆ ಗುತ್ತಿಗೆ ಕೊಡಲಾಗುವುದು.ಆಸಕ್ತಿಯುಳ್ಳವರು ದಿನಾಂಕ 20.12.2023 ರಿಂದ 30.12.2023 ರೊಳಗಾಗಿ ಟೆಂಡರಿಗೆ ಸಂಬಂಧಿಸಿದ ಷರತ್ತುಗಳನ್ನು ಕಾಲೇಜಿನ ಕಛೇರಿಯಲ್ಲಿ ಪಡೆಯಬಹುದು.

ಸಹಿ/– **ನಿರ್ದೇಶಕರು** ಸಹಿ/– **ಪ್ರಾಂಶುಪಾಲರು**



ಬಾಪೂಜಿ ವಿದ್ಯಾ ಸಂಸ್ಥೆ(ರಿ)

**ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ-577004**

**ಕ್ಯಾಂಟೀನ್ ಟೆಂಡರ್ ಪ್ರಕಟಣೆ**

ಈ ಮೂಲಕ ತಿಳಿಯಪಡಿಸುವುದೇನೆಂದರೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ, ಆವರಣದಲ್ಲಿರುವ " ಸಸ್ಯಹಾರಿ ಉಪಹಾರ ಗೃಹ" ಬಾಡಿಗೆ ರೂಪದಲ್ಲಿ ಗುತ್ತಿಗೆ ಕೊಡಲಾಗುವುದು.ಆಸಕ್ತಿಯುಳ್ಳವರು ದಿನಾಂಕ 20.12.2023 ರಿಂದ 30.12.2023 ರೊಳಗಾಗಿ ಟೆಂಡರಿಗೆ ಸಂಬಂಧಿಸಿದ ಷರತ್ತುಗಳನ್ನು ಕಾಲೇಜಿನ ಕಛೇರಿಯಲ್ಲಿ ಪಡೆಯಬಹುದು.

ಸಹಿ/– **ನಿರ್ದೇಶಕರು** ಸಹಿ/– **ಪ್ರಾಂಶುಪಾಲರು**



**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ**

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

**ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ**

ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ ಜಪ್ತಿ/ಆಧಾರ ಮಾಡಲ್ಪಟ್ಟಿರುವ ಸ್ಥಿರ ಸೊತ್ತನ್ನು ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಡಿಆರ್/ಡಿವಿಜಿ/ದಾವಾ/103/2019–20ರ ಮೇರೆಗೆ ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಭಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು.

| ಕ್ರ ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಸದರಿ ಅಮಲ್ಜಾರಿ ಕ್ರಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಬಾಕಿ ಮೊತ್ತ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ , ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಮೆ॥ ಎನ್.ಎನ್. ಏಜೆನ್ಸಿಸ್, ಮಾಲೀಕರು 1) ಶ್ರೀಮತಿ ಪುಷ್ಪಾ ಜಿ.ಎಸ್ ಕೋಂ ಲೇಟ್ ಸಿದ್ದೇಶ್ ಜಿ.ಎಸ್. 2) ನಿಖಿಲ್ ಜಿ.ಎಸ್ ಬಿನ್ ಲೇಟ್ ಸಿದ್ದೇಶ್ ಜಿ.ಎಸ್., 3) ನಿತಿನ್ ಜಿ.ಎಸ್. ಬಿನ್ ಲೇಟ್ ಸಿದ್ದೇಶ್ ಜಿ.ಎಸ್. ಮನೆ ನಂ.573, ಮಹದೇವ, 6ನೇ ಮುಖ್ಯರಸ್ತೆ, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ. | ಇ.ಪಿ.ಸಂಖ್ಯೆ 18/2022–23 ರೂ. 4,95,13,835–00 (ರೂಪಾಯಿ ನಾಲ್ಕು ಕೋಟಿ ತೊಂಬತ್ತೈದು ಲಕ್ಷದ ಹದಿಮೂರು ಸಾವಿರದ ಎಂಟುನೂರ ಮೂವತ್ತೈದು ಮಾತ್ರ) (ದಿನಾಂಕ 08–12–2023 ಕ್ಕೆ ಇದ್ದಂತೆ + ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು) | ದಾವಣಗೆರೆ ನಗರದ ಎಂ.ಸಿ.ಸಿ. ಬಿ ಬ್ಲಾಕ್, 6ನೇ ಮುಖ್ಯರಸ್ತೆ, 5ನೇ ಕ್ರಾಸ್‌ನಲ್ಲಿ ಬರತಕ್ಕ ಡೋರ್ ನಂ. 3581 ರ ಖಾಲಿ ನಿವೇಶನ ಇದರ ಅಳತೆ 140X80 ಅಡಿಗಳು. ಸೊತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ : ಖಾಸಗಿ ಕಟ್ಟಡ, ಪಶ್ಚಿಮಕ್ಕೆ : 6ನೇ ಮುಖ್ಯರಸ್ತೆ, ಉತ್ತರಕ್ಕೆ : ಖಾಲಿ ನಿವೇಶನ, ದಕ್ಷಿಣಕ್ಕೆ : ಖಾಸಗಿ ಕಟ್ಟಡ. | ದಿನಾಂಕ 20–12–2023 ನೇ ಬುಧವಾರ ಮಧ್ಯಾಹ್ನ 12–00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ. | 1,00,000=00 |

**ಹರಾಜಿನ ಷರತ್ತುಗಳು :–** (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್‌ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಚಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5 ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ.** (13) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11–00 ಘಂಟೆಯಿಂದ ಸಂಜೆ 5–00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ದಿನಾಂಕ : 12–12–2023
ಸ್ಥಳ : ದಾವಣಗೆರೆ

ಸಹಿ/–
**ಬಸವರಾಜ್ ಎಂ.**
**ಪ್ರಧಾನ ವ್ಯವಸ್ಥಾಪಕರು**

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ
ಸಹಿ/–
ಜ್ಯೋತಿ ಮಾಳಾಪುರ, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, (ನಿ.441)
ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.

## ಭಜನ್ ಲಾಲ್ ಸಿಎಂ

**(1ನೇ ಪುಟದಿಂದ)** ಚಿತ್ರದಲ್ಲಿ ಶರ್ಮಾ ಅವರು ಕೊನೆಯಲ್ಲಿದ್ದರು. ನೂತನ ಶಾಸಕರ ಗುಂಪು ಚಿತ್ರದಲ್ಲಿ ಅವರು ಮೊದಲ ಎರಡು ಸಾಲುಗಳಲ್ಲೂ ಸ್ಥಾನ ಪಡೆದಿರಲಿಲ್ಲ. ಮೂರನೇ ಸಾಲಿನ ಮೂಲೆಯಲ್ಲಿದ್ದರು.

ಶರ್ಮಾ ಮೊದಲ ಬಾರಿ ಶಾಸಕರಾಗಿದ್ದರೂ ಸಹ, ರಾಜಕೀಯಕ್ಕೆ ಹೊಸಬರಲ್ಲ. ಅವರು ಮೂರು ಬಾರಿ ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.

ಎ.ಬಿ.ವಿ.ಪಿ.ಯಿಂದ ರಾಜಕೀಯ ಜೀವನ ಆರಂಭಿಸಿದ್ದ ಅವರು, ಆರ್.ಎಸ್.ಎಸ್. ಜೊತೆ ಕಾರ್ಯನಿರ್ವಹಿಸಿದ್ದಾರೆ.

ಶರ್ಮ ಅವರನ್ನು ಬಿಜೆಪಿಯ ಭದ್ರ ಕೋಟೆಯಾದ ಸಂಗನೇರ್‌ನಿಂದ ಕಣಕ್ಕಿಳಿಸಲಾಗಿತ್ತು. ಅವರಿಗೆ ಈ ಕ್ಷೇತ್ರದ ಟಿಕೆಟ್ ನೀಡಿದ್ದು ಹಲವರ ಹುಬ್ಬೇರುವಂತೆ ಮಾಡಿತ್ತು. ಮುಖ್ಯಮಂತ್ರಿ ಸ್ಥಾನಕ್ಕೆ ಅವರನ್ನು ತರುವ ಉದ್ದೇಶದಿಂದಲೇ ಬಿಜೆಪಿ ಭದ್ರಕೋಟೆಯಿಂದ ಕಣಕ್ಕಿಳಿಸಲಾಗಿತ್ತು ಎಂಬ ಮಾತು ಕೇಳಿ ಬರುತ್ತಿದೆ.

## ಅಪರಾಧ ಮಸೂದೆ ವಾಪಸ್

**(1ನೇ ಪುಟದಿಂದ)** ಮಸೂದೆಗಳ ಐದು ಸೆಕ್ಷನ್‌ಗಳಲ್ಲಿ ಪ್ರಮುಖ ಬದಲಾವಣೆ ಮಾಡಲಾಗಿದೆ. ಬಹುತೇಕ ಬದಲಾವಣೆಗಳು ವ್ಯಾಕರಣ ಹಾಗೂ ಭಾಷೆಗೆ ಸಂಬಂಧಿಸಿದವು ಎಂದು ಅಮಿತ್ ಷಾ ಹೇಳಿದ್ದಾರೆ. ಭಾರತೀಯ ನ್ಯಾಯ ಸಂಹಿತೆ ಮಸೂದೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮ ಮಸೂದೆಗಳನ್ನು ಕೇಂದ್ರ ಸರ್ಕಾರ ಮಂಡಿಸಿದೆ. ಈ ಮೂರೂ ಮಸೂದೆಗಳ ಚರ್ಚೆಗೆ 12 ಗಂಟೆಗಳ ಸಮಯ ನೀಡಲಾಗಿದೆ.

# ವಕೀಲರ ಮೇಲೆ ಹಲ್ಲೆ ಖಂಡಿಸಿ ಪ್ರತಿಭಟನೆ



**ಹರಪನಹಳ್ಳಿ**

ಹರಪನಹಳ್ಳಿ, ಡಿ. 12- ಕಲಬುರ್ಗಿ ವಕೀಲರ ಸಂಘದ ಸದಸ್ಯ ಈರಣ್ಣ ಗೌಡ ಪಾಟೀಲ್ ಅವರ ಹತ್ಯೆ ಹಾಗೂ ಚಿಕ್ಕಮಗಳೂರಿನ ಕಿರಿಯ ವಕೀಲನ ಮೇಲೆ ಪೊಲೀಸ್‌ರಿಂದ ಜರುಗಿದ ಹಲ್ಲೆ ಖಂಡಿಸಿ ಇಲ್ಲಿನ ವಕೀಲರಿಂದ ಪ್ರತಿಭಟನೆ ನಡೆಸಿ ಉಪ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಮತ್ತಿಹಳ್ಳಿ ಅಜ್ಜಣ್ಣ ಮಾತನಾಡಿ, ವಕೀಲ ಈರಣ್ಣ ಗೌಡ ಪಾಟೀಲ್ ಅವರನ್ನು ಅಮಾನುಷವಾಗಿ ಹತ್ಯೆ ಮಾಡಲಾಗಿದೆ. ಚಿಕ್ಕಮಗಳೂರಿನ ಕಿರಿಯ ವಕೀಲನ ಮೇಲೆ ಪೊಲೀಸರಿಂದ ಜರುಗಿದ ಹಲ್ಲೆ ಖಂಡನೀಯ. ದುಷ್ಕರ್ಮಿಗಳಿಬ್ಬರು ಹಾಡಹಗಲಲ್ಲೇ ವಕೀಲರೊಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಕೊಲೆ ಮಾಡಿದ ಎಲ್ಲಾ ಹಂತಕರನ್ನು ಬಂಧಿಸಬೇಕು. ಪ್ರಕರಣದಲ್ಲಿ ಭಾಗಿಯಾಗಿರುವ ದುಷ್ಕರ್ಮಿಗಳಿಗೆ ಸೂಕ್ತ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

ವಕೀಲರ ಸಂಘದ ಮಾಜಿ ಅಧ್ಯಕ್ಷ ಕೆ. ಜಗದಪ್ಪ ಮಾತನಾಡಿ, ಸರ್ಕಾರ ವಕೀಲರಿಗೆ ಸೂಕ್ತ ರಕ್ಷಣೆ ನೀಡಬೇಕು. ರಾಜ್ಯ ಸರ್ಕಾರವು ಅಪರಾಧವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ವಕೀಲರ ಸಂಘದ ಉಪಾಧ್ಯಕ್ಷ ಕೆ.ವಿರೂಪಾಕ್ಷಪ್ಪ ಮನವಿ ಓದಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ವೇಳೆ ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶಗೌಡ, ಕಾರ್ಯದರ್ಶಿ ಕೆ. ಆನಂದ, ಜಂಟಿ ಕಾರ್ಯದರ್ಶಿ ಹೂಲೆಪ್ಪ, ಖಜಾಂಚಿ ರೇಣುಕಾ ಎಫ್. ಮೇಟಿ. ಕಾರ್ಯಕಾರಿ ಸಮಿತಿಯ ಕೇಶವ ಮೂರ್ತಿ, ಬಿ.ಕರಿಯಪ್ಪ, ಮಲ್ಲಮ್ಮ ಬಡಿಗೇರ್, ರಾಜಪ್ಪ, ಮಾರುತಿ, ವಕೀಲರಾದ ಕೆ. ಚಂದ್ರೇಗೌಡ, ಪಿ. ಜಗದೀಶಗೌಡ, ಚಿಗಟೇರಿ ವೀರಣ್ಣ, ಹಾಲೇಶ, ಎಸ್.ಎಂ. ರುದ್ರಮುನಿಸ್ವಾಮಿ, ಬಿ. ರೇವನಗೌಡ, ಆರ್. ರಾಮನಗೌಡ ಪಾಟೀಲ್, ರಾಂ ಭಟ್ಟ, ಹೆಚ್. ವೀರನಗೌಡ, ಕೆ. ಪ್ರಕಾಶ, ಬಿ. ಗೋಣಿಬಸಪ್ಪ, ವಾಸುದೇವ, ಕೆ. ಉಚ್ಚೆಂಗೆಪ್ಪ, ಬಿ. ಮಹಬೂಬ್ ಸಾಬ್, ಮೈದೂರು ಮಲ್ಲಿಕಾರ್ಜುನ, ಎಂ. ಮೃತ್ಯುಂಜಯ, ಜೆ. ಸೀಮಾ, ರಾಜಪ್ಪ, ಕೆಂದಗಳ್ಳಿ ಪ್ರಕಾಶ, ಓ. ತಿರುಪತಿ, ಡಿ. ಹನುಮಂತಪ್ಪ, ಬಾಗಳಿ ಮಂಜುನಾಥ, ಕೆ. ನಾಗರಾಜ, ಎಂ. ನಾಗೇಂದ್ರಪ್ಪ, ಸಣ್ಣ ನಿಂಗನಗೌಡ, ಮುತ್ತಿಗಿ ಮಂಜುನಾಥ, ಸೌಖ್ಯ, ಕೆ. ದ್ರಾಕ್ಷಾಯಣಮ್ಮ, ನಾಗರಾಜನಾಯ್ಕ, ಎಂ. ಸುರೇಶ, ಕೆ. ಬಸವರಾಜ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಬೇತೂರು ನೀಲಮ್ಮ ಪ್ರೌಢಶಾಲೆಯಲ್ಲಿ ಕಸಾಪ ಸಾಹಿತ್ಯೋತ್ಸವ ದತ್ತಿ ಉಪನ್ಯಾಸ



ದಾವಣಗೆರೆ, ಡಿ.12- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಶ್ರೀಮತಿ ಬೇತೂರು ನೀಲಮ್ಮ ಸಿದ್ದಬಸಪ್ಪ ಪ್ರೌಢಶಾಲೆ ಆನೆಕೊಂಡ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಇವರ ಸಂಯುಕ್ತ ಆಶ್ರಯದಲ್ಲಿ 'ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ'ದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಶಾಲಾ ಮುಖ್ಯೋಪಾಧ್ಯಾಯ ಮಹೇಶ್ವರಯ್ಯ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಕಸಾಪ ನಿರ್ದೇಶಕ ಎಂ. ಷಡಕ್ಷರಪ್ಪ ಬೇತೂರು ಪ್ರಾಸ್ತಾವಿಕವಾಗಿ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿ ಹಾಗೂ ನಾಡು -ನುಡಿ ಸಂಸ್ಕೃತಿ ಕಲೆಯ ಬಗ್ಗೆ ತಿಳಿಸಿದರು.

ಎಆರ್‌ಜಿ ಕಾಲೇಜಿನ ನಿವೃತ್ತ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಮಲ್ಲಿಕಾರ್ಜುನ ಹಲಸಂಗಿ, ದತ್ತಿ ಉಪನ್ಯಾಸ ಮಾಡಿ, ವಚನ ಸಾಹಿತ್ಯದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಕನ್ನಡ ನಾಡಿನ ವಚನಕಾರರ ಹಾಗೂ ವಚನ ಸಾಹಿತ್ಯದ ಬಗ್ಗೆ ತಿಳಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕು ಕಸಾಪ ನಿರ್ದೇಶಕರಾದ ಶ್ರೀಮತಿ ಸೌಭಾಗ್ಯಮ್ಮ ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಸಂಭ್ರಮದ ದೀಪೋತ್ಸವ



ಮಲೇಬೆನ್ನೂರು, ಡಿ.12- ಪಟ್ಟಣದ ಹೊರವಲಯದಲ್ಲಿರುವ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವದ ಅಂಗವಾಗಿ ಭಾನುವಾರ ಸಂಜೆ ಹಮ್ಮಿಕೊಂಡಿದ್ದ ದೀಪೋತ್ಸವ ಸಂಭ್ರಮದಿಂದ ಜರುಗಿತು. ದೀಪೋತ್ಸವಕ್ಕೆ ಮುನ್ನ ದೇವಸ್ಥಾನದ ಆವರಣದಲ್ಲಿ ದಾವಣಗೆರೆಯ ವಾಸವಿ ಮಹಿಳಾ ಮತ್ತು ಯುವತಿಯರ ಸಂಘಗಳ ವತಿಯಿಂದ ಮಹಿಳೆಯರು ಗಾನಾಮೃತದಿಂದ ಶಿವಾರಾಧನೆ ಕಾರ್ಯಕ್ರಮ ನಡೆಸಿಕೊಟ್ಟರು.

ದೇವಸ್ಥಾನದ ಅಧ್ಯಕ್ಷ ಬಿ. ಪಂಚಪ್ಪ, ಉಪಾಧ್ಯಕ್ಷ ಬಿ. ಚಿದಾನಂದಪ್ಪ, ಖಜಾಂಚಿ ಬಿ.ವಿ. ರುದ್ರೇಶ್, ಬಿ. ನಾಗೇಂದ್ರಪ್ಪ, ಬಿ. ನಾಗೇಶ್, ಬಿ. ಉಮಾಶಂಕರ್, ಬಿ.ಎಂ. ಹರ್ಷ, ಎನ್.ಕೆ. ಬಸವರಾಜ್, ಎಸ್.ಎನ್. ಶಂಭುಲಿಂಗಪ್ಪ ಸೇರಿದಂತೆ, ಇನ್ನೂ ಅನೇಕರು ಈ ವೇಳೆ ಹಾಜರಿದ್ದು, ಕಾರ್ಯಕ್ರಮ ನಡೆಸಿಕೊಟ್ಟರು.

## ಮಾಹಿತಿ ಸಂಗ್ರಹ ಸಾಧ್ಯವಾಗದು : ಕೇಂದ್ರ

**(1ನೇ ಪುಟದಿಂದ)** ಆದೇಶದ ಅನ್ವಯ 32,381 ವಿದೇಶಿಯರನ್ನು ಗುರುತಿಸಲಾಗಿದೆ. ಅಸ್ಸಾಂ ಅಷ್ಟೇ ಅಲ್ಲದೇ ದೇಶಾದ್ಯಂತ ಅಕ್ರಮ ವಲಸಿಗರಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಅಕ್ರಮ ವಲಸಿಗರನ್ನು ಗುರುತಿಸಿ ಹಸ್ತಾಂತರಿಸುವುದು ಸಂಕೀರ್ಣ ಪ್ರಕ್ರಿಯೆಯಾಗಿದೆ. ವಾಮಮಾರ್ಗದಿಂದ ಅವರು ಬಂದಿರುವ ಕಾರಣ ದೇಶದ ವಿವಿಧ ಭಾಗಗಳಲ್ಲಿರುವ ಅಕ್ರಮ ವಲಸಿಗರ ಮಾಹಿತಿ ನಿಖರವಾಗಿ ಗುರುತಿಸಲು ಸಾಧ್ಯವಾಗದು ಎಂದು ಸರ್ಕಾರ ಹೇಳಿದೆ. 2017ರಿಂದ 2022ರ ನಡುವೆ 14,346 ವಿದೇಶಿಗರನ್ನು ಹಸ್ತಾಂತರಿಸಲಾಗಿದೆ ಎಂದೂ ಕೇಂದ್ರ ಸರ್ಕಾರ ಹೇಳಿದೆ.

## ದಾಳಿಯಲ್ಲಿ 23 ಪಾಕ್ ಸೈನಿಕರು ಹತ

**(1ನೇ ಪುಟದಿಂದ)** ಅಪ್ಪಳಿಸುವ ಪ್ರಯತ್ನ ನಡೆಸಲಾಗಿತ್ತು. ಈ ಪ್ರಯತ್ನವನ್ನು ತಡೆಯಲಾಯಿತು. ಈ ಸಂದರ್ಭದಲ್ಲಿ ಉಂಟಾದ ಸ್ಫೋಟಗಳಿಂದ ಕಟ್ಟಡ ಕುಸಿದು ಹಲವರು ಸಾವನ್ನಪ್ಪಿದ್ದಾರೆ ಎಂದು ಸೈನ್ಯ ತಿಳಿಸಿದೆ.

23 ಪಾಕಿಸ್ತಾನಿ ಸೈನಿಕರು ಹತರಾಗಿದ್ದಾರೆ. ಆರು ಉಗ್ರರನ್ನು ಹೊಡೆದುರುಳಿಸಲಾಗಿದೆ ಎಂದು ಸೈನ್ಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಸೊಕ್ಕೆ ಗ್ರಾಮದಲ್ಲಿ ಸಿಲಿಂಡರ್, ಗ್ಯಾಸ್ ಸ್ಟೌವ್ ವಿತರಣೆ



ಜಗಳೂರು, ಡಿ. 12- ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳಿಂದ ಸಹಾಯ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ವಿಕಾಸ್ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸ್ವಯ ಸೇವಾ ಸಂಸ್ಥೆ ಅಧ್ಯಕ್ಷರಾದ ಕೆ. ಮಹಾಲಕ್ಷ್ಮಿ ತಿಳಿಸಿದರು.

ಅವರು ಜಗಳೂರು ತಾಲ್ಲೂಕಿನ ಸೊಕ್ಕೆ ಗ್ರಾಮದಲ್ಲಿ ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿಯಲ್ಲಿ ವಿಕಾಸ್ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸ್ವಯಂ ಸೇವಾ ಸಂಸ್ಥೆ ದಾವಣಗೆರೆ ಇವರ ಸಹಯೋಗದಲ್ಲಿ ನಡೆದ ಬಡ ಕುಟುಂಬಗಳಿಗೆ ಉಚಿತ ಗ್ಯಾಸ್ ಸಿಲಿಂಡರ್ ಮತ್ತು ಗ್ಯಾಸ್ ಸ್ಟೌವ್ ವಿತರಣೆ ಸಂದರ್ಭದಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತರಾದ ಬಿ.ಟಿ. ಭಾಗ್ಯಮ್ಮ ಇತರರು ಉಪಸ್ಥಿತರಿದ್ದರು.

# ವಾಣಿಜ್ಯ ಬೆಳೆ ವಿಸ್ತೀರ್ಣ ಹೆಚ್ಚಾಗಿರುವುದರಿಂದ ತೆಂಗು ಬೆಳೆ ವಿನಾಶದ ಅಂಚಿನಲ್ಲಿದೆ

**ಎಂ.ಜಿ. ಬಸವನಗೌಡ**



ದಾವಣಗೆರೆ, ಡಿ. 12- ವಾಣಿಜ್ಯ ಬೆಳೆಗಳ ವಿಸ್ತೀರ್ಣ ಹೆಚ್ಚಾಗಿರುವುದರಿಂದ ಇಂದು ತೆಂಗು ಬೆಳೆಯ ವಿನಾಶದ ಅಂಚಿನಲ್ಲಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಅಭಿಪ್ರಾಯಪಟ್ಟರು.

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು ಹಾಗೂ ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ 'ತೆಂಗು ಬೆಳೆಯ ವೈಜ್ಞಾನಿಕ ತಾಂತ್ರಿಕತೆಗಳು' ಜಿಲ್ಲಾ ಮಟ್ಟದ ಕಾರ್ಯಾಗಾರದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಸ್ಯ ಸಂಕುಲದಲ್ಲಿ ತೆಂಗು ಕಲ್ಪವೃಕ್ಷವೆಂದು ಗುರುತಿಸಲ್ಪಟ್ಟಿದೆ. ಇದನ್ನು ಬೆಳೆಸಿ, ಬಳಸಿ, ಉಳಿಸುವ ಕರ್ತವ್ಯ ಪ್ರತಿಯೊಬ್ಬ ರೈತರದ್ದಾಗಿದೆ. ಪೌಷ್ಟಿಕಾಂಶದಲ್ಲಿ ಅತೀ ಹೆಚ್ಚು ಲಾರಿಕ್ ಆಮ್ಲವುಳ್ಳ ತೆಂಗು ನಮಗೆಲ್ಲ ಸಂಜೀವಿನಿಯ ಇನ್ನೊಂದು ರೂಪ ಎಂದು ತಿಳಿಸಿದರು. ಅತೀ ಬರಗಾಲವನ್ನು ತಡೆದುಕೊಳ್ಳುವ ಸಾಮರ್ಥ್ಯ ತೆಂಗಿನ ಬೆಳೆಗಿರುವುದರಿಂದ ಹವಾಮಾನ ವೈಪರೀತ್ಯದಲ್ಲೂ ಉತ್ತಮ ಆದಾಯ ಕೊಡುವ ತೋಟಗಾರಿಕೆ ಬೆಳೆ ಇದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ತೋಟಗಾರಿಕೆ ಉಪನಿರ್ದೇಶಕ ರಾಘವೇಂದ್ರ ಪ್ರಸಾದ್, ಇಲಾಖೆಯ ವತಿಯಿಂದ ಬೆಳೆ ವಿಸ್ತರಣೆ, ತೆಂಗು ಪುನಶ್ಚೇತನ, ರೋಗ ಮತ್ತು ಕೀಟಗಳ ನಿರ್ವಹಣೆಗೆ ಅನುದಾನ ಲಭ್ಯವಿದ್ದು, ರೈತರು ಇದರ ಸದುಪಯೋಗ ಪಡೆಯಬೇಕೆಂದರು.

ತೆಂಗು ಅಭಿವೃದ್ಧಿ ಮಂಡಳಿಯ ಹಿರಿಯ ತಾಂತ್ರಿಕ ಅಧಿಕಾರಿ ಜಿ. ಧನಶೇಖರ್ ಮಾತನಾಡಿ, ತೆಂಗು ಅಭಿವೃದ್ಧಿ ಮಂಡಳಿಯ ಪ್ರಮುಖ ಯೋಜನೆಗಳಾದ ತೆಂಗಿನ ಮರ ಹತ್ತುವ ಕಾರ್ಯಕ್ರಮ, ಮೌಲ್ಯವರ್ಧನೆ ಮತ್ತು ಸಂಸ್ಕರಣಾ ಕಾರ್ಯಕ್ರಮ, ಕ್ಷೀರ ಸುರಕ್ಷಾ ವಿಮಾ ಯೋಜನೆ, ಗುಣ ಮಟ್ಟದ ಸಸಿಗಳ ಉತ್ಪಾದನಾ ಉತ್ತೇಜನಾ ಯೋಜನೆಗಳ ಸದುಪಯೋಗ ಪಡೆಯಬೇಕೆಂದು ಮಾಹಿತಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೇಂದ್ರದ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ್ ಮಾತನಾಡಿ, ಕೇಂದ್ರದ ವತಿಯಿಂದ ಜಿಲ್ಲೆಯಲ್ಲಿ ಸುಮಾರು 300 ಕ್ಕೂ ಹೆಚ್ಚು ಮರ ಹತ್ತುವ ಸ್ನೇಹಿತರಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲಾಗಿದ್ದು, ಪ್ರತೀ ವರ್ಷ 10,000 ರೂ. ಹೆಚ್ಚು ಗುಣಮಟ್ಟದ ಅರಸೀಕೆರೆ ತಳಿಗಳನ್ನು ರೈತರಿಗೆ ಮಾರಾಟ ಮಾಡಲಾಗುತ್ತಿದೆ. ಜೊತೆಗೆ ತೆಂಗಿನ ಬಿಳಿ ನೊಣದ ನಿಯಂತ್ರಣಕ್ಕೆ ಐಸಿರಿಯಾ ಪರೋಪಜೀವಿಯನ್ನು ಉತ್ಪಾದಿಸಿ, ರೈತರಿಗೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ತೆಂಗಿನ ಪೋಷಕಾಂಶಗಳ ನಿರ್ವಹಣೆಯ ಬಗ್ಗೆ ಮಣ್ಣು ವಿಜ್ಞಾನಿ ಹೆಚ್.ಎಂ. ಸಣ್ಣಗೌಡ್ರ, ರೋಗ ಮತ್ತು ಕೀಟಗಳ ನಿರ್ವಹಣೆಯ ಬಗ್ಗೆ ಡಾ. ಅವಿನಾಶ್ ಟಿ.ಜಿ., ಮೌಲ್ಯವರ್ಧನೆ ಮತ್ತು ಸಂಸ್ಕರಣೆಯ ಬಗ್ಗೆ ವೈಜಿಪಿ ರೈತ ಉತ್ಪಾದಕ ಕಂಪನಿಯ ಮುಖ್ಯಸ್ಥ ಪ್ರಶಾಂತ್ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀಮತಿ ರೇಷ್ಮಾ ಪರ್ವಿನ್, ವೀರಭದ್ರಸ್ವಾಮಿ, ಇಲಾಖಾ ಅಧಿಕಾರಿ ಶ್ರೀಲಕ್ಷ್ಮೀ, ನಿಟ್ಟೂರು ತರಳಬಾಳು ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ನಿಟ್ಟೂರು ಶಿವಣ್ಣ, ಪ್ರಕಾಶ್, ರಾಜೇಂದ್ರ, ವಿಜ್ಞಾನಿಗಳು ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅಯೋಧ್ಯೆ ಮಂದಿರ ಪೂಜಾರಿ ಹೆಸರಿನಲ್ಲಿ ಅಶ್ಲೀಲ ಚಿತ್ರ

**(1ನೇ ಪುಟದಿಂದ)** ಮಂದಿರದ ಪೂಜಾರಿ ಮಾಡಲಾಗುತ್ತಿದೆಯೇ?' ಎಂದು ಪ್ರಶ್ನಿಸಿದ್ದರು.

ಆದರೆ, ಪಿರಿಡಿಯ ಅವರು ಪ್ರಕಟಿಸಿದ ಚಿತ್ರವನ್ನು ಪರಿಶೀಲಿಸಿದಾಗ, ಪಾಂಡೆ ಹೋಲುವ ರೀತಿಯಲ್ಲಿ ಚಿತ್ರವನ್ನು ಬಿಂಬಿಸಿರುವುದು ಗೊತ್ತಾಯಿತು. ಹಿಂದೂ ಸಂತರ ಪ್ರತಿಷ್ಠೆಗೆ ಧಕ್ಕೆ ತರಲು ಹಾಗೂ ಹಿಂದೂಗಳ ಭಾವನೆಗಳಿಗೆ ಧಕ್ಕೆ ತರಲು ಈ ಪೋಸ್ಟ್ ಪ್ರಕಟಿಸಲಾಗಿದೆ ಎಂದು ಮಕ್ವಾನ ಅವರು ದೂರು ನೀಡಿದ್ದಾರೆ.

ಅಲ್ಲದೇ, ಮಹಿಳೆಯ ಅಶ್ಲೀಲ ಚಿತ್ರವನ್ನು ಪ್ರಕಟಿಸಿದಾಗ, ಅವರ ಪ್ರತಿಷ್ಠೆಗೆ ಹಾನಿಯಾಗಬಹುದು ಎಂಬುದನ್ನು ತಿಳಿದಿದ್ದರೂ ಈ ಚಿತ್ರ ಪ್ರಕಟಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

# ಪಕ್ಷ ಸಂಘಟಿಸಿ ಅಧಿಕಾರಕ್ಕೆ ತಂದಿದ್ದೇನೆ

**ಬೇರೆ ಪಕ್ಷಕ್ಕೆ ಹೋಗುವುದಿಲ್ಲ ಎಂದ ಡಿಕೆಶಿ**

ಬೆಳಗಾವಿ, ಡಿ. 12 - ಪಕ್ಷ ಸಂಘಟಿಸಿ ಅಧಿಕಾರಕ್ಕೆ ತಂದು ಬೇರೆ ಪಕ್ಷಕ್ಕೆ ಹೋಗಲು ನಾನೇನು ಹುಚ್ಚನೇ ಎಂದು ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ನಾನು ಹುಟ್ಟುತ್ತಲೇ ಕಾಂಗ್ರೆಸ್ಸಿಗ, ನನಗೆ ನನ್ನದೇ ಆದ ಮೂಲ ಆದರ್ಶಗಳಿವೆ, ಗಾಂಧಿ ಕುಟುಂಬ ಹಾಗೂ ಕಾಂಗ್ರೆಸ್ ಮೇಲೆ ಅಪಾರ ನಂಬಿಕೆ ಇದೆ ಎಂದಿದ್ದಾರೆ. ಪ್ರಭಾವೀ ಸಚಿವರೊಬ್ಬರು 50-60 ಶಾಸಕರ ಸಮೇತ ಬಿಜೆಪಿ ಸೇರುತ್ತಾರೆ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದರು.

ಈ ಬಗ್ಗೆ ಬೆಳಗಾವಿಯ ಸುವರ್ಣಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಅವರು ಹೇಳಿದ್ದಕ್ಕೆಲ್ಲಾ ನಾನು ಏಕೆ ಹೊಣೆಯಾಗಬೇಕು? ಎಂದು ಪ್ರಶ್ನಿಸಿದ್ದಾರೆ.

ಅವರು ಏನಾದರೂ ಹೇಳಿಕೊಂಡು ತಿರುಗಲಿ, ನಾನು ತಲೆ ಕೆಡಿಸಿಕೊಂಡಿಲ್ಲ. ನಾನು ಕಾಂಗ್ರೆಸ್ಸಿಗ, ಇದರ ಗಡಿ ಬಿಟ್ಟು ಒಂದು ಹೆಜ್ಜೆಯೂ ಹೊರಗಿಡುವವನಲ್ಲ ಎಂದು ಶಿವಕುಮಾರ್ ಹೇಳಿದ್ದಾರೆ.

ತೆಲಂಗಾಣ ಚುನಾವಣಾ ಫಲಿತಾಂಶದ ನಂತರ ಕುಮಾರಸ್ವಾಮಿಯ ಇಂತಹ ಹೇಳಿಕೆ ಹಿಂದೆ ರಾಜಕೀಯ ಷಡ್ಯಂತ್ರ ಅಡಗಿದೆ. ತಮ್ಮವರನ್ನು ಹಿಡಿದಿಟ್ಟುಕೊಳ್ಳಲು ಬೇರೆಯವರ ಮೇಲೆ ಅಸ್ತ್ರ ಪ್ರಯೋಗ ಮಾಡುತ್ತಿದ್ದಾರೆ ಎಂದಿದ್ದಾರೆ.

ಇದೇ ಸಂದರ್ಭದಲ್ಲಿ ಪ್ರತ್ಯೇಕವಾಗಿ ಮಾತನಾಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಬಿಜೆಪಿಗೆ ಹೋಗುವ ಪ್ರಭಾವಿ ಸಚಿವರು ಯಾರೆಂದು ಕುಮಾರಸ್ವಾಮಿ ಅವರೇ ಹೇಳಬೇಕು, ಈ ಪ್ರಶ್ನೆಯನ್ನು ನನಗೆ ಏತಕ್ಕೆ ಕೇಳುತ್ತೀರಿ? ಎಂದರು.

ನಾನು ಸ್ನೇಹಿತರ ಜೊತೆಗೂಡಿ ಪ್ರವಾಸ ಮಾಡಬೇಕೆಂದಿದ್ದೆ. ಅದಕ್ಕೆ ನೀವು ಕುಮಾರಸ್ವಾಮಿ ಹೇಳಿಕೆಯನ್ನು ನನಗೆ ತಳಕು ಹಾಕಬೇಡಿ ಎಂದಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಕುಮಾರಸ್ವಾಮಿ ಅಧಿಕಾರ ಇಲ್ಲದೇ ಭ್ರಮನಿರಸನರಾಗಿ ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ, ಅವರ ಪಕ್ಷವನ್ನು ರಾಜ್ಯದ ಜನತೆ ತಿರಸ್ಕರಿಸಿದರೂ ಇನ್ನೂ ಅವರಿಗೆ ಬುದ್ಧಿ ಬಂದಿಲ್ಲ ಎಂದರು.


**ಸೈಟ್ ಮಾರಾಟಕ್ಕೆ (KHB)**
(For Immediat Register Only)
ತುಂಗಭದ್ರಾ ಬಡಾವಣೆ (ಕಮೀಷನ್ +ರಿಜಿಸ್ಟರ್ ಸೇರಿ)
20x30 ಪೂರ್ವ (16 ಲಕ್ಷ) 30x40 ದಕ್ಷಿಣ (36 ಲಕ್ಷ)
40x60 ದಕ್ಷಿಣ (70 ಲಕ್ಷ)
ಕಿರಣ್ ಭೂಸ್ನೂರ್ (ಏಜೆಂಟ್)
98440 63409
ಮನೆ ಕಟ್ಟಲು ತುಂಬಾ ಚೆನ್ನಾಗಿದೆ

**ನಮ್ಮಲ್ಲಿ ವಿಚಾರಿಸಿ**
* EC (All Karnataka) * Certified Copy * Ekhata Change * E-swattu * Building Licence * Property tax * Site & Merger Bifurcation * Property Registration * Missed Alenation Copy + Layout Plan * Building Construction
ಕಿರಣ್ ಭೂಸನೂರ್
98440 63409, 97315 63409

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ ಅಕ್ಕ-ಪಕ್ಕ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x35 ದಕ್ಷಿಣ, ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತದಲ್ಲಿ 30x40 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ವೆಂಡರ್ ಮತ್ತು ಸಪ್ಲೈಯರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
98442 99666, 98441 99966

**ಬಾಡಿಗೆಗೆ**
ಹಳೇ ಪಿ.ಬಿ. ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕದಲ್ಲಿ
1. ಮೊದಲನೇ ಮಹಡಿ - 4000 ಅಡಿ
2. ಎರಡನೇ ಮಹಡಿ - 4000 ಅಡಿ
3. Terrace Floor - 4000 ಅಡಿ
4. Basement - 4000 ಅಡಿ
ಸಂಪರ್ಕಿಸಿ : ಮೊ.
94480 28103

**ಮನೆ, ಸೈಟು ಬೇಕು**
ದೇವರಾಜ ಅರಸು ಬಡಾವಣೆಯಲ್ಲಿ ಮನೆ, ಸೈಟು ಬೇಕಾಗಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ :
99005-21848

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
99642 12379

**WANTED**
Pharmacist
fulltime with
QP Retail Store,
Davangere.
90360 59698

**ಮಾರಾಟಕ್ಕಿದೆ**
ಮಿಟ್ಲಕಟ್ಟೆಯಲ್ಲಿ 19 ಗುಂಟೆ ಗೋಡೌನ್ ಸಹಿತ ಜಾಗ ಮಾರಾಟಕ್ಕಿದೆ, ದಾವಣಗೆರೆ, ಮಲೇಬೆನ್ನೂರು ರೋಡ್.
91641 29236

**ಗೋಡೌನ್ ಬಾಡಿಗೆಗೆ ಇದೆ**
ದಾವಣಗೆರೆ APMC A-1 ಬ್ಲಾಕ್‌ನಲ್ಲಿ ಗೋಡೌನ್ ಹಾಗೂ ಆಫೀಸ್ ಇರುವ 5000 ಚ.ಅಡಿ ಗೋಡೌನ್ ಬಾಡಿಗೆಗೆ ಇದೆ. ವಿಚಾರಿಸಿ :
98443 26096

**ಬೇಕಾಗಿದ್ದಾರೆ**
Accountant
Qualification : B.Com, M.Com, MBA,
Experience : Min 5 years,
Davanagere. Contact :
94803 87880

**ಶಕೀರಾ ಬ್ಯೂಟಿ ಪಾರ್ಲರ್/ಸಲೂನ್**
Shakeera Beauty Parlour/Salon
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸಕ್ಕಾಗಿ ಬೇಕಾಗಿದ್ದಾರೆ.
ಬ್ಯೂಟಿಷಿಯನ್ - 2, ಸಹಾಯಕರು - 2
ಸಂಪರ್ಕಿಸಿ : 93420 19013
#741/4, 10th Main, P.J. Extension Opposite Modi Compound, Davanagere-2.

**ಬೇಕರಿ - ಬಾಡಿಗೆಗಿದೆ**
ಬೇಕರಿ ಉತ್ಪನ್ನಗಳನ್ನು ಮಾಡುವ, ಕುಕ್ಕಿಂಗ್ ಮಷಿನ್, ಓವನ್, ಜನರೇಟರ್, ಹಿಟ್ಟು ಕಲಸುವ ಯಂತ್ರಗಳೊಂದಿಗೆ ಜಾಗ ಸಹಿತ ಬಾಡಿಗೆಗಿದೆ. ಸಂಪರ್ಕಿಸಿ :
94491-76944, 90084-94427

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬೇಕಾಗಿದ್ದಾರೆ**
ಹರಿಹರ, ದೊಡ್ಡಬಾತಿ ಮತ್ತು ಕುಮಾರ ಪಟ್ಟಣಂಗೆ ಮೀಶೋ ಲಾಗಿಸ್ಟಿಕ್ಸ್ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
ವಿಳಾಸ : ವಿದ್ಯಾನಗರ 'ಬಿ' ಬ್ಲಾಕ್, 3ನೇ ಮೇನ್, 1ನೇ ಕ್ರಾಸ್, ಎದುರುಗಡೆ ಗ್ರಾಮ ದೇವತೆ ಆಟೋ ನಿಲ್ದಾಣ,
ಭೇಟಿಯ ಸಮಯ : ಬೆ. 10.30 ರಿಂದ ಮ. 2 ರವರೆಗೆ.
86606 12391, 77604 96670

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ
(Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಬಿ.ಕೆ. ಬಾರ್ & ರೆಸ್ಟೋರೆಂಟ್
ಮಿಲ್ಟ್ರಿ ಹೋಟೆಲ್‌ಗೆ ಮ್ಯಾನೇಜರ್ ಬೇಕಾಗಿದ್ದಾರೆ. ಬಾಡಾ ಕ್ರಾಸ್, ಮೋತಿ ನಗರ, ದಾವಣಗೆರೆ.
98441 01178

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, B.COM ಆದ ಮಹಿಳೆಯರು ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ ದಾವಣಗೆರೆ.

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಬ್ರಾಂಡೆಡ್ ಬಟ್ಟೆ ಅಂಗಡಿಗಳಲ್ಲಿ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ**
ಸಂಪರ್ಕಿಸಿ :
98867 57688

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಬೇಕಾಗಿದ್ದಾರೆ**
ಸೆಲ್ಫ್ ಸರ್ವಿಸ್ ಹೋಟೆಲ್‌ನಲ್ಲಿ ಕೌಂಟರ್ ಸಪ್ಲೈಯರ್ ಕೆಲಸಕ್ಕೆ ನುರಿತ ಯುವಕರು ಬೇಕಾಗಿದ್ದಾರೆ.
ಕೆಲಸದ ಸಮಯ : 12pm-10pm
95388 96927

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.


**ಪೇಪರ್ ಕಪ್ ಮಾಡುವ ಸೆಕೆಂಡ್‌ಹ್ಯಾಂಡ್ ಮಿಷನ್ ಮಾರಾಟಕ್ಕಿದೆ**
ಸಂಪರ್ಕಿಸಿ : ದಾವಣಗೆರೆ.
93807 13883

**Change of Spouse Name**
I, Pratibha Nagaraj Kasal W/o Nagaraj K.J. R/o Seetha Nath Nilay, # 3611/44, Kundawad Road, Davangere-4. have changed my husband name Nagaraj (old name) to Nagaraj K.J.(New Name) vide affidavit dtd 12.12.2023 sworn before Notary M.Prathaparudra, Davanagere. Henceforth all my husband transactions & dealings will be in his new name Nagaraj K.J.

**COMMERCIAL COMPLEX FOR RENT**
Ground Floor - 600 Sq.ft
First Floor 1700 Sq.ft
Second Floor 1700 Sq.ft
with lift facility in chetan Hotel Road, Davanagere.
79752 35107

**ನೇರ ಪರೀಕ್ಷೆಗಳು**
SSLC, PUC, NTC : ನರ್ಸರಿ ಟೀಚರ್ಸ್ ಟ್ರೇನಿಂಗ್. BA, B.Com, MA, M.Com, MBA (ALL), ಸಂಪರ್ಕಿಸಿ :
SGET (R) ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರೋಡ್ ದಾವಣಗೆರೆ
86602 35013

**WANTED**
Freshers for Auditor Office (Ladies Only)
77607 40760

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ರೈತ ಬಾಂಧವರೇ ಜೀವಾಮೃತ**
ಜವಾರಿ ತಳಿಯ ಆಕಳ ಸಗಣಿ, ಗಂಜಲ, ಸಾವಯವ ಬೆಲ್ಲ ಹಾಗೂ ದ್ವಿದಳ ಧಾನ್ಯದ ಹಿಟ್ಟಿನಿಂದ ವೈಜ್ಞಾನಿಕವಾಗಿ ತಯಾರಿಸಲಾದ ಕೃಷಿ ಮತ್ತು ತೋಟಗಾರಿಕೆ ಎಲ್ಲಾ ಬೆಳೆಗಳಲ್ಲಿ ಉಪಯೋಗಿಸಬಹುದು ಹಾಗೂ ನಮ್ಮಲ್ಲಿ ಅಡಿಕೆ ತೋಟದಲ್ಲಿ ಕಳೆಗಳಿಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಸಂಪರ್ಕಿಸಿ : 98451 04109

**ಬೇಕಾಗಿದ್ದಾರೆ**
ಹೋಟೆಲ್ ಕೆಲಸ, ಹೋಟೆಲ್‌ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
87110 04905

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಮತ್ತು ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
ಮೆ|| ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
#43H, SJJM ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
99001 42052

**HOUSE FOR RENT**
Newly built house
Ground floor and First floor
# 868/51, Shankar Viihar Badavane, Near Vani Honda showroom, PB Road Block 3rd, 2nd cross, Near siddi Vinayaka Temple, Davangere -4.
97397 97638

**ಮನೆ ಬಾಡಿಗೆಗಿದೆ**
30x40 ಅಡಿ ಅಳತೆಯ ಎರಡು ಬೆಡ್ ರೂಂ, ಬೋರ್ ವೆಲ್ ಸೌಲಭ್ಯವಿರುವ ಸುಸಜ್ಜಿತ ನೆಲಮಹಡಿ ಮನೆ, 'ಅಶ್ವತ್ಥ್ ಹಲಗೇರಿ ಅಕ್ಷಯ ನಿಲಯ', 7ನೇ ಕ್ರಾಸ್, 18ನೇ ಮೇನ್, ಕುವೆಂಪುನಗರ, ಬಾಪೂಜಿ ಶಾಲೆ ಹತ್ತಿರ, ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಬಾಡಿಗೆಗಿದೆ. ಸಂಪರ್ಕಿಸಿ:
ರಾಘುವೇಂದ್ರ ಹಲಗೇರಿ
97403 84315

**ಪರ್ಸನಲ್ ಲೋನ್**
13 ಸಾವಿರಕ್ಕಿಂತ ಹೆಚ್ಚಿನ ಸಂಬಳ ಇದ್ದು ಪ್ರತಿ ತಿಂಗಳು ಸಂಬಳ ಅಕೌಂಟ್‌ಗೆ ಬರುತ್ತಿದ್ದರೆ. ಪರ್ಸನಲ್ ಲೋನ್ ಕೊಡಲಾಗುವುದು.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
(ಷರತ್ತುಗಳು ಅನ್ವಯ)
74835 24662

**WANTED**
Female Candidate having the degree of Commerce is required to work in Auditor Office
Contact : B.G. Basavarajappa
# 43H, S.J.J.M. Complex, Jayadeva Circle, Hadadi Road, Dvg.
99001 42052

# ವಿಶ್ವಕರ್ಮ ಸಮಾಜದಿಂದ ಸಂವಾದ ಕಾರ್ಯಕ್ರಮ



ಚನ್ನಗಿರಿ, ಡಿ.12- ಅಖಿಲ ಭಾರತ ವಿಶ್ವಕರ್ಮ ಪರಿಷತ್ ಹಾಗೂ ವಡ್ನಾಳ್ ಶ್ರೀಮಠ, ವಿಶ್ವಕರ್ಮ ಸಮಾಜ ಮತ್ತು ಸಂಘ -ಸಂಸ್ಥೆಗಳು, ಲಯನ್ಸ್ ಕ್ಲಬ್ ಇವರುಗಳ ಸಂಯುಕ್ತಾಶ್ರಯದಲ್ಲಿ ತಾಲ್ಲೂಕಿನ ಕಾಶಿಮಠ, ವಡ್ನಾಳ್‌ನಲ್ಲಿ ಸಂವಾದ ಕಾರ್ಯಕ್ರಮ ನಡೆಯಿತು.

ಅಷ್ಟೋತ್ತರ ಶತ ಶ್ರೀ ಶಂಕರಾತ್ಮಾನಂದ ಸರಸ್ವತಿ ಇವರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಅಖಿಲ ಭಾರತ ವಿಶ್ವಕರ್ಮ ಪರಿಷತ್ತಿನ ಜಿಲ್ಲಾಧ್ಯಕ್ಷ ಎಂ.ಈ. ಮೌನೇಶ್ವರಚಾರಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಾಧ್ಯಕ್ಷ ಆರ್. ಪ್ರಸನ್ನ ಕುಮಾರ್, ಚನ್ನಗಿರಿ ತಾಲ್ಲೂಕು ವಿಶ್ವಕರ್ಮ ಸಮಾಜದ ತಾಲ್ಲೂಕು ಅಧ್ಯಕ್ಷ ಅಮ್ಮನಗುಡ್ಡದ ಪೂಜಾರ್, ಜಯಾಚಾರ್ ಹಿರೇಮೇಗಳಗೆರೆ, ಕೆ. ಸೋಮಶೇಖರಾಚಾರಿ, ಕಾಡಜ್ಜಿ ಜಿ.ಕಾಳಾಚಾರ್, ಬಾವಿಹಾಳ್ ನಾಗರಾಜಚಾರಿ, ಪಿ.ಮಹಾರುದ್ರಚಾರ್, ಎಲ್.ಟಿ. ವೀರೇಶ್ ಆಚಾರ್, ಗಾಯತ್ರಿ ಚಿತ್ರದುರ್ಗ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಉದ್ಯಾನವನದಲ್ಲಿ ಆಟದ ಸಾಮಗ್ರಿಗಳ ಉದ್ಘಾಟನೆ



ದಾವಣಗೆರೆ, ಡಿ. 11 - ನಗರದ ತರಳಬಾಳು ಬಡಾವಣೆ 10 ಕ್ರಾಸ್‌ನಲ್ಲಿರುವ ಮಕ್ಕಳ ಉದ್ಯಾನವನದಲ್ಲಿ ಹೊಸದಾಗಿ ನಿರ್ಮಾಣವಾದ ಮಕ್ಕಳ ಆಟದ ಸಾಮಗ್ರಿಗಳನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಗೀತಾ ದಿಳ್ಯೆಪ್ಪ ಹಾಗೂ ಹಿರಿಯ ನಾಗರಿಕರುಗಳಾದ ಬಸವನಗೌಡ್ರು, ಶಿವಶಂಕರ್, ನಾಗರಾಜಪ್ಪ, ಬಸವಂತಪ್ಪ, ಕರೂರ್ ಜಗದೀಶಪ್ಪ ಹಾಗೂ ವಿನಯ್ ದಿಳ್ಯೆಪ್ಪ ಉಪಸ್ಥಿತರಿದ್ದರು.

# ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆಗೆ ಒತ್ತಾಯ




ದಾವಣಗೆರೆ, ಡಿ. 12 - ಕಲ್ಬುರ್ಗಿಯ ವಕೀಲ ಈರಣ್ಣಗೌಡರ ಹತ್ಯೆಯನ್ನು ಡಿಐಜಿಯವರಿಂದ ತನಿಖೆ ನಡೆಸಿ ಎಲ್ಲಾ ಹಂತಕರನ್ನು ಕೂಡಲೇ ಬಂಧಿಸಬೇಕು, ಮೃತರ ಕುಟುಂಬ ವರ್ಗದವರಿಗೆ ಸರ್ಕಾರ ಸೂಕ್ತ ಪರಿಹಾರ ಒದಗಿಸಬೇಕು ಮತ್ತು ವಕೀಲರ ಸಂರಕ್ಷಣಾ ಕಾಯ್ದೆಯನ್ನು ಕೂಡಲೇ ಜಾರಿಗೊಳಿಸಬೇಕು ಎಂದು ಆಗ್ರಹಿಸಿ, ಜಿಲ್ಲಾ ವಕೀಲರ ಸಂಘದಿಂದ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ಕಾರ್ಯದರ್ಶಿ ಎಸ್. ಬಸವರಾಜ್, ಉಪಾಧ್ಯಕ್ಷ ಜಿ. ಕೆ. ಬಸವರಾಜ್ ಗೋಪನಾಳ್, ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್, ಕಾರ್ಯಕಾರಿ ಸಮಿತಿ ಸದಸ್ಯ ವಾಗೀಶ್ ಕಟಗಿಹಳ್ಳಿ ಮಠ, ಎಂ. ಚೌಡಪ್ಪ, ಸಂತೋಷ್ ಕುಮಾರ್, ಎಂ. ರಾಘವೇಂದ್ರ, ಅಜ್ಜಯ್ಯ ಆವರಗೆರೆ, ಎಲ್. ನಾಗರಾಜ್, ಮುಸ್ತಾಕ್ ಅಹ್ಮದ್ ಮೌಲ್ವಿ, ಹೆಚ್.ಎಸ್. ಯೋಗೀಶ್, ಗುಮ್ಮನೂರು ಮಲ್ಲಿಕಾರ್ಜುನ್, ಚಂದ್ರಶೇಖರ್, ಆಂಜನೇಯ ಗುರೂಜಿ, ಧನಂಜಯ, ಎಸ್. ನಾಗರಾಜ್, ಆರ್. ಬಸವರಾಜ್, ಸಲೀಂ, ಹೆಚ್.ಎಸ್. ಗುರುಮೂರ್ತಿ, ಜಿ.ಕೆ. ಬಸವರಾಜ್, ಜಯಲಕ್ಷ್ಮಿ, ಅಲಮೇಲು ಸೇರಿದಂತೆ ಮುಂತಾದವರು ಹಾಜರಿದ್ದರು.

ಇದಕ್ಕೂ ಮುನ್ನ ಜಿಲ್ಲಾ ವಕೀಲರ ಸಂಘದ ಸಾಂಸ್ಥಿಕ ಸಮುದಾಯ ಭವನದಲ್ಲಿ ಅಧ್ಯಕ್ಷ ಎಲ್. ಹೆಚ್. ಅರುಣ್‌ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಕೀಲರ ಹತ್ಯೆಯನ್ನು ಖಂಡಿಸಿ ಮತ್ತು ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಲು ಒತ್ತಾಯಿಸಿ ವಕೀಲರಾದ ಗುಮ್ಮನೂರು ಮಲ್ಲಿಕಾರ್ಜುನ್, ಎಸ್. ಮಂಜು, ಡಿ.ಪಿ. ಬಸವರಾಜ್, ಟಿ.ಆರ್. ಗುರುಬಸವರಾಜ್, ಕರಿಬಸಪ್ಪ, ಭಾಗ್ಯಲಕ್ಷ್ಮಿ, ನೋಟರಿ ಖಾದರ್, ರಾಜಪ್ಪ, ಕಂದಗಲ್ ಗೌಡ್ರು ಮಲ್ಲಿಕಾರ್ಜುನ್ ಮಾತನಾಡಿದರು.

# ಮಹಾನಗರ ಪಾಲಿಕೆಯಲ್ಲಿ ಇ-ಸ್ವತ್ತಿಗೋಸ್ಕರ ಬೇಸತ್ತ ಸಾರ್ವಜನಿಕರು

**ಓದುಗರ ಪತ್ರ**

**ಮಾನ್ಯರೇ,**

ಸ್ಮಾರ್ಟ್ ಸಿಟಿ ದಾವಣಗೆರೆ ನಗರ 4 ದಿಕ್ಕುಗಳಲ್ಲಿ ಶರವೇಗದಿಂದ ಬೆಳೆಯುತ್ತಲಿದೆ. ಸರ್ವತೋಮುಖ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವ ನಗರದಲ್ಲಿ ಸಾರ್ವಜನಿಕರು ತಮ್ಮ ಅಗತ್ಯ ಸೇವೆಗಳಿಗಾಗಿ ಮತ್ತು ಮೂಲಭೂತ ಸೌಕರ್ಯಗಳನ್ನು ಪಡೆಯಲು ಮಹಾನಗರ ಪಾಲಿಕೆಗೆ ಹೋಗಲೇಬೇಕು. ಅದರಲ್ಲೂ ಪ್ರಮುಖವಾಗಿ ಇ-ಸ್ವತ್ತು ಪಡೆಯಲು ಸೈಟು, ಮನೆಗಳ ಹಾಗೂ ನೀರಿನ ಕಂದಾಯ ಕಟ್ಟಲು, ಖಾತೆ ವರ್ಗಾವಣೆ ಪಡೆಯಲು, ಕಟ್ಟಡ ಕಟ್ಟಲು ಪರವಾನಿಗೆ ಪಡೆಯಲು ಮತ್ತು ಜನನ ಮರಣಗಳ ದಾಖಲೆ ಪಡೆಯಲು ಹೀಗೆ ಹಲವಾರು ಕೆಲಸ ಕಾರ್ಯಗಳಿಗೆ ಮಹಾನಗರ ಪಾಲಿಕೆಗೆ ಹೋಗಲೇಬೇಕು.

ಆಧುನಿಕ ಜಗತ್ತು ಡಿಜಿಟಲ್ ಯುಗ ಆಗುತ್ತಿರುವುದರಿಂದ ಎಲ್ಲಾ ಸೇವಾ ಕಾರ್ಯಗಳ ಆನ್‌ಲೈನ್ ತಂತ್ರಜ್ಞಾನದ ಸಾಫ್ಟ್‌ವೇರ್ ಮುಖಾಂತರದಿಂದ ಸಾಗಲೇ ಬೇಕಾಗಿದೆ. ನಗರ ಬೆಳೆದಂತೆ ಮತ್ತು ಜನಸಂಖ್ಯೆ ಹೆಚ್ಚಾದಂತೆ ಮಹಾನಗರ ಪಾಲಿಕೆ ಹೆಚ್ಚು ಜನಸಂದಣೆಯಿಂದ ಕೂಡಿದ್ದು ಸಾರ್ವಜನಿಕರ ಕೆಲಸ ಕಾರ್ಯಗಳು ವಿಳಂಬ ಆಗುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆ ಆಗುತ್ತಿವೆ.

ಯಾವುದೇ ಆಸ್ತಿ ಮಾರಾಟ ಮಾಡಲು, ಖರೀದಿಸಲು, ಬ್ಯಾಂಕುಗಳಿಂದ ಸಾಲ ಪಡೆಯಲು ಹೀಗೆ ಎಲ್ಲಾ ಉದ್ದೇಶಕ್ಕೂ ಇ-ಸ್ವತ್ತುಗಳು ಬೇಕೇ ಬೇಕು ಎಂದು ಸರ್ಕಾರ ಕಡ್ಡಾಯ ಮಾಡಿದೆ. ಮುಂದಿನ ದಿನಗಳಲ್ಲಿ ಇದರ ಮೂಲ ಉದ್ದೇಶ ಒಳ್ಳೆಯದೇ ಇದ್ದರೂ ಸಹ ಸದ್ಯದ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಈ ಆಧುನಿಕ ಆನ್‌ಲೈನ್ ಪದ್ಧತಿಗಳು ಪೂರ್ಣ ಮಾಹಿತಿ (ತರಬೇತಿ) ಇಲ್ಲದ ಕಾರಣ ಹಾಗೂ ಕಚೇರಿಯ ಕೆಲವು ಸಿಬ್ಬಂದಿಗಳು, ಗುಮಾಸ್ತರುಗಳು ಸಹ ಈ ಪದ್ಧತಿಗೆ ಹೊಂದಿಕೊಳ್ಳದೇ ಗೊಂದಲ ಆಗುತ್ತಿದೆ. ಇದರಿಂದ ಸಾಮಾನ್ಯ ಜನರಿಗೆ ತೊಂದರೆ ಆಗುತ್ತಿದೆ. ಅನೇಕ ವಿಧಾನಗಳ ಮೂಲಕ ಸರ್ಕಾರಕ್ಕೆ ತೆರಿಗೆ ಕಟ್ಟುತ್ತಿರುವುದರಿಂದ ಸರ್ಕಾರದ ಆದಾಯ (ಬೊಕ್ಕಸ) ಸಾರ್ವಜನಿಕರಿಂದ ತುಂಬುತ್ತಿದೆ. ತೆರಿಗೆ ಕಟ್ಟುವ ಸಾರ್ವಜನಿಕರ ಸೇವೆಗಳಿಗೆ ಸ್ಪಂದಿಸದೇ ಸಾಮಾನ್ಯ ಜನರನ್ನು ಕಡೆಗಣಿಸುತ್ತಿರುವುದು ಯಾವ ನ್ಯಾಯ. ಕೆಲವು ಅಧಿಕಾರಿಗಳು ಗುಮಾಸ್ತರುಗಳ ನಿರ್ಲಕ್ಷ್ಯ ಮಾಡಿ ಸಾಮಾನ್ಯ ಜನರಿಗೆ ಸತಾಯಿಸುವುದು ವಿಳಂಬ ಮಾಡುವುದರಿಂದ ಇ-ಸ್ವತ್ತಿನ ಸಲುವಾಗಿ ಸಾಮಾನ್ಯ ಜನರು ಬೇಸತ್ತಿದ್ದಾರೆ.

ತಮ್ಮ ವೈಯಕ್ತಿಕ ಕಷ್ಟ-ತೊಂದರೆಗಳಿಗೆ ತುರ್ತಾಗಿ ತಮ್ಮ ಆಸ್ತಿಯ ಮೇಲೆ ಸಾಲ ಪಡೆಯುವುದಾಗಲೀ, ಮಾರಾಟ ಮಾಡುವುದಾಗಲೀ ಸಮಯಕ್ಕೆ ಸರಿಯಾಗಿ ಆಗುತ್ತಿಲ್ಲ.

ಇ-ಸ್ವತ್ತು ಸಿಗದೇ ವಿಳಂಬ ಆಗುತ್ತಿದೆ. ಇದರಿಂದ ಪ್ರತಿದಿನ ಕಚೇರಿಗಳಲ್ಲಿ ಎರಡು-ಮೂರು ಗಲಾಟೆಗಳು ವಾಗ್ವಾದಕ್ಕಿಳಿದು ಮಾತಿನ ಚಕಮಕಿಗಳನ್ನು ಮಾಡುತ್ತಿರುವುದನ್ನು ನೋಡುತ್ತಲೇ ಇರುತ್ತೇವೆ. ಲಂಚ ಕೊಡದೆ ಕಚೇರಿಗಳಲ್ಲಿ ಯಾವುದೇ ಕೆಲಸವಾಗುವುದು ಕಷ್ಟಕರವಾಗುತ್ತಿದೆ. ಕೆಲವು ಅಧಿಕಾರಿಗಳು ಲಂಚ ಕೊಡದಿದ್ದರೆ ತಪ್ಪು ಹುಡುಕಿ ನೂರೆಂಟು ಕೊಕ್ಕೆಗಳನ್ನು ಇಡುತ್ತಾರೆ. ಲಂಚ ಕೊಟ್ಟರೆ ಎಲ್ಲಾ ಮಾಯವಾಗುತ್ತವೆ.

ಲಂಚ ಕೊಟ್ಟವರಿಗೆ ಒಂದು ಕಾನೂನು, ಕೊಡದವರಿಗೆ ಇನ್ನೊಂದು ಕಾನೂನು, ಸರ್ಕಾರ ಕಾನೂನು ಮಾಡಿರುವ ಮೂಲ ಉದ್ದೇಶ ಜನಸಾಮಾನ್ಯರಿಗೆ ಮತ್ತು ದೇಶಕ್ಕೆ ಅನುಕೂಲವಾಗಲಿ ಎಂಬ ಉದ್ದೇಶ. ಆದರೆ ಕೆಲವು ಅಧಿಕಾರಿಗಳು ಆ ಕಾನೂನುಗಳನ್ನು ದುರುಪಯೋಗವಾಗಿ ಬಳಸಿಕೊಳ್ಳುತ್ತಿದ್ದಾರೆ. ಸಂಕಷ್ಟದಲ್ಲಿ ಇರುವ ಸಾಮಾನ್ಯ ಜನರು ಬೇಸತ್ತು ನನ್ನ ಕೆಲಸ ಆದರೆ ಸಾಕು ಎಂದು ಲಂಚ ಕೊಟ್ಟು ಕೆಲಸ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ, ಜನರು ಜಾಗೃತರಾಗಬೇಕು, ಕಾನೂನು ರಕ್ಷಣೆ ಪಡೆಯಬೇಕು, ಒಗ್ಗಟ್ಟಾಗಬೇಕು ಹಾಗೂ ಮಾಧ್ಯಮಗಳ ಸಹಾಯ, ಸಲಹೆ ಪಡೆದು ಭ್ರಷ್ಟಾಚಾರ ತಡೆಯಬೇಕು. ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ಕೊಡಬೇಕು.

ಜನಪ್ರತಿನಿಧಿಗಳು ಹಾಗೂ ಉನ್ನತ ಸ್ಥಾನದಲ್ಲಿ ಇರುವ ಮೇಲಾಧಿಕಾರಿಗಳು ಇಂತಹ ಸಾರ್ವಜನಿಕರ ದಿನನಿತ್ಯದ ಸಮಸ್ಯೆಗಳ ಬಗ್ಗೆ ಸ್ಪಂದಿಸಿ ಗಮನಹರಿಸಿ, ಪರಿಹರಿಸಿ ಜನರಿಗೆ ವಿಳಂಬವಾಗದೇ ತುರ್ತಾಗಿ ನೀಡುವಂತೆ ಸರಿಪಡಿಸಬೇಕು.

ಜನಸಂಪರ್ಕ ಸಭೆ ನಡೆಸಿ ಅನುಕೂಲ ಮಾಡಿಕೊಟ್ಟು ಸಕಾಲಕ್ಕೆ ಸೌಲಭ್ಯ ಮಾಡಿಕೊಡಬೇಕು ಎಂದು ವಿನಂತಿಸಿಕೊಳ್ಳುತ್ತೇವೆ.

ದೇಶದಲ್ಲಿ ಬೇರೂರಿ ತಾಂಡವವಾಡುತ್ತಿರುವ ಲಂಚದ ಪಿಡುಗನ್ನು ತೊಲಗಿಸಿದರೆ ಮಾತ್ರ ನಮ್ಮ ದೇಶ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯ. ನೊಂದು ಬೇಸತ್ತ ಸಾಮಾನ್ಯ ಜನರಲ್ಲಿ ನಾನು ಒಬ್ಬ.

**- ಹೆಚ್.ವಿ. ಮಂಜುನಾಥಸ್ವಾಮಿ,**
98448 82366

# ಎಲ್ಲಾ ಧರ್ಮಗಳಲ್ಲೂ ಇದೆ ಏಕದೇವೋಪಾಸನೆ



ದಾವಣಗೆರೆ, ಡಿ.12- ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಯಹೂದಿ ಈ ಎಲ್ಲಾ ಧರ್ಮಗಳೂ ಪರಮಾತ್ಮ ಒಬ್ಬನೇ ಎಂಬುದನ್ನು ಸಾರುತ್ತಿವೆ ಹಾಗೂ ಸ್ಪಷ್ಟಪಡಿಸಿವೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ತಿಳಿಸಿದರು.

ಇಲ್ಲಿನ ವಿದ್ಯಾನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ 9ನೇ ದಿನವಾದ ಮಂಗಳವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಹಿಂದೂ ಧರ್ಮದಲ್ಲಿ ಪುರಾತನ ಕಾಲದಿಂದಲೇ ಏಕದೇವೋಪಾಸನೆ ವ್ಯವಸ್ಥೆ ಇತ್ತು. ಆದರೆ, ಪುರಾಣಗಳ ಕಾಲದಿಂದ ಬಹುದೇವೋಪಾಸನೆ ಬೇರೂರಿತು ಎಂದು ಹೇಳಿದರು.

ಇಸ್ಲಾಂ ಧರ್ಮದಲ್ಲೂ ಆರಂಭದಲ್ಲಿ ಬಹುದೇವೋ ಪಾಸನೆ ಇತ್ತು. ಮೊಹಮ್ಮದ್ ಪೈಗಂಬರ್ ಅವರು ನಂತರ ಏಕದೇವೋಪಾಸನೆ ಪ್ರತಿಪಾದಿಸಿ, ಸಮಾಜಕ್ಕೆ ಪ್ರಬಲವಾಗಿ ಬೋಧಿಸಿ ಸಾಧಿಸಿದರು. ನಂತರ ಇಸ್ಲಾಂ ಏಕೇಶ್ವರನ ಉಪಾಸನೆ ಮಾಡುವ ಧರ್ಮವಾಗಿದೆ ಎಂದರು.

ಸಿಖ್ ಧರ್ಮದ ಧರ್ಮ ಗುರು ಗುರುನಾನಕ್‌ರ ಗುರು ಗ್ರಂಥ ಸಾಹೇಬ್ ಗ್ರಂಥದಲ್ಲಿ ಏಕೇಶ್ವರ ಉಪಾಸನೆ ಬಗ್ಗೆ ಹೇಳಿದ್ದಾರೆ. ಜೈನ ಧರ್ಮವೂ ಏಕೇಶ್ವರನ ಉಪಾಸನೆ ಮಾಡುತ್ತದೆ. ಹಾಸನ ಜಿಲ್ಲೆಯ ಹಳೇಬೀಡು ನಲ್ಲಿರುವ ಶಿಲಾಶಾಸನದಲ್ಲಿ ಏಕೇಶ್ವರನ ಬಗ್ಗೆ ಶ್ಲೋಕಗಳನ್ನು ಕಾಣಬಹುದಾಗಿದೆ ಎಂದು ವಿವರಿಸಿದರು.

ಸರ್ವಧರ್ಮಗಳಲ್ಲಿ ಪರಮಾತ್ಮ ಒಬ್ಬನೇ ಎಂದು ತಿಳಿಸಿದ್ದಾರೆ. ಆದರೆ, ಅವನ ಉಪಾಸನೆ ಮಾಡುವ ಸತ್ಯವನ್ನು ಭಾರತೀಯ ಸನಾತನ ಧರ್ಮ ನಮಗೆ ತಿಳಿಸಿಕೊಟ್ಟಿದೆ. ಎಲ್ಲರಿಗೂ ಜ್ಞಾನ ಬಲದಿಂದ ತಿಳಿಯಲು ಸಾಧ್ಯವಾಗದ ಕಾರಣ, ಪರಮಾತ್ಮನ ಜ್ಯೋತಿರ್ಲಿಂಗದ ರೂಪವನ್ನು ಶಿಲೆಗಳಲ್ಲಿ ಕಟೆದು ಈಶ್ವರನ ಗುಡಿಗಳಲ್ಲಿ ಸ್ಥಾಪಿಸಲಾಗಿದೆ.

## ಇಂದು ಶಿವಯೋಗದ ಪ್ರಾತ್ಯಕ್ಷಿಕೆ

**ಇಂದಿನಿಂದ ಪ್ರತಿದಿನ ಬೆಳಿಗ್ಗೆ 6 ರಿಂದ 7ರವರೆಗೆ ಪ್ರವಚನ ನಡೆಯುತ್ತಿರುವ ಸ್ಥಳದಲ್ಲಿ ಶಿವಯೋಗದ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿದ್ದು, ಡಾ. ಬಸವರಾಜ ರಾಜಋಷಿ ನಡೆಸಿಕೊಡುವರು. ಆಸಕ್ತರು ಭಾಗವಹಿಸಬಹುದು.**

ಶ್ರೀ ಸಾಮಾನ್ಯರಿಗೆ ಭಗವಂತನ ಮೇಲೆ ಪ್ರೀತಿ, ವಿಶ್ವಾಸ ಉಂಟಾಗಲಿ ಎಂಬ ಸದುದ್ದೇಶದಿಂದ 12 ಜ್ಯೋತಿರ್ಲಿಂಗಗಳನ್ನು ಸ್ಥಾಪಿಸಲಾಯಿತು. ಅವುಗಳನ್ನು 12 ಹೆಸರುಗಳಿಂದ ಉಪಾಸನೆ ಮಾಡಲಾಗುತ್ತಿತ್ತು. ಹೀಗೆ ಎಲ್ಲೆಲ್ಲಿ ಯಾವ ಊರಿನಲ್ಲಿ ಶಿವಲಿಂಗಗಳಿವೆಯೋ ಅವೆಲ್ಲವೂ ಶಿವನ ಸ್ವರೂಪ ಅರ್ಥೈಸಿಕೊಡಬಲ್ಲ ಕುರುಹುಗಳಾಗಿವೆ. ಭಕ್ತಿಯಿಂದ ಯಾವ ದೇವಸ್ಥಾನಕ್ಕೆ ಹೋಗಿ ನಮಿಸಿದರೂ ಫಲ ಒಂದೇ ಎಂದು ಅವರು ಪ್ರತಿಪಾದಿಸಿದರು.

ಪರಮಾತ್ಮ ಸರ್ವಜ್ಞ, ಜ್ಞಾನಸಾಗರ, ಎಲ್ಲಾ ಭಕ್ತರ ಮನಸ್ಸನ್ನು ಏಕ ಕಾಲದಲ್ಲೇ ಅರ್ಥ ಮಾಡಿಕೊಳ್ಳುವ ಮಹಾನ್ ಶಕ್ತಿವುಳ್ಳವನು. ಆದ್ದರಿಂದ ದೇವಸ್ಥಾನದಲ್ಲಿ ಅಷ್ಟೇ ಅಲ್ಲ, ಅಂಗದ ಮೇಲೂ ಇಷ್ಟಲಿಂಗದ ರೂಪದಲ್ಲಿ ಧರಿಸಲು ಶರಣರು ಹೇಳಿದ್ದಾರೆ. 'ಓಂ ನಮಃ ಶಿವಾಯ' ಮೂಲ ಮಂತ್ರದಿಂದ ಪರಮಾತ್ಮನನ್ನು ಹೇಗೆ ನಮಿಸಬೇಕು ಎಂದು ಬಸವಾದಿ ಶಿವಶರಣರು ನಮಗೆ ನೆನಪಿಸಿದ್ದಾರೆ ಎಂಬುದನ್ನು ವಚನಗಳ ಮೂಲಕ ವಿಶ್ಲೇಷಿಸಿದರು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾ ಕುಮಾರಿ ಲೀಲಾಜಿ ನೇತೃತ್ವದಲ್ಲಿ ಸಂಸ್ಥೆಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನದ ನೇರ ಪ್ರಸಾರ ವೀಕ್ಷಿಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/ rajayogatvkannada) ವೀಕ್ಷಿಸಬಹುದು.

## ಪರಮಾತ್ಮನ ಹುಡುಕಾಟದಲ್ಲಿದ್ದಾಗ ಸಿಕ್ಕಿದ್ದು ಈಶ್ವರೀಯ ವಿಶ್ವವಿದ್ಯಾಲಯ

ನನ್ನ ವಿದ್ಯಾರ್ಥಿ ಜೀವನದಲ್ಲಿ ಭಗವಂತ ಯಾರು? ಎಲ್ಲಿದ್ದಾನೆ? ಹೇಗಿದ್ದಾನೆ? ಎಂದು ತಿಳಿಯುವ ಬಗ್ಗೆ ಸಾಕಷ್ಟು ಕೌತುಕ ಉಂಟಾಗಿತ್ತು. ಅದನ್ನು ಅರಿಯುವ ಉದ್ದೇಶದಿಂದ ಅನೇಕ ಜಗದ್ಗುರುಗಳು, ಸದ್ಗುರುಗಳನ್ನು ಕೇಳಿದ್ದೆ. ಅವರಿಗೆ ತಿಳಿದ ವಿಚಾರಗಳನ್ನು ಅವರು ಬೋಧಿಸಿದ್ದರು. ಆದರೆ, ನನ್ನ ಮನಸ್ಸಿಗೆ ತೃಪ್ತಿಯಾಗಿರಲಿಲ್ಲ. ಇದರಾಚೆ ಬೇರೇ ಏನೋ ಸತ್ಯವಿದೆ ಅನಿಸಿತ್ತು.

ಬೆಂಗಳೂರಿನಲ್ಲಿ ಅಧ್ಯಯನ ಮಾಡುತ್ತಿದ್ದಾಗ ಪತ್ರಿಕೆಯೊಂದರಲ್ಲಿ ಪರಮಾತ್ಮನ ಜೊತೆ ಮಾತನಾಡುವುದು ಹೇಗೆ? ಕುರಿತು ಈಶ್ವರೀಯ ವಿದ್ಯಾಲಯದ ಸುದ್ದಿ ತಿಳಿದು, ವಿಳಾಸ ಹುಡುಕಿ ಹೋಗುವಷ್ಟರಲ್ಲಿ ಪ್ರವಚನ ಮುಗಿದಿತ್ತು.

ನಂತರ ಚಿಕ್ಕ ಬಾಡಿಗೆ ಮನೆಯಲ್ಲಿ ನಡೆಸುತ್ತಿದ್ದ ಈಶ್ವರೀಯ ವಿದ್ಯಾಲಯದಲ್ಲಿನ ಹೃದಯ ಪುಷ್ಪ ಮಾತಾಜಿಯವರನ್ನು ಭೇಟಿ ಮಾಡಿ, ನನಗಿರುವ ಕುತೂಹಲಗಳ ಬಗ್ಗೆ ವಿವರಿಸಿದಾಗ, ಅವರು ನಿತ್ಯ ಪ್ರವಚನಕ್ಕೆ ಬರುವಂತೆ ಹೇಳಿದ್ದರು.

ಪ್ರವಚನಕ್ಕೆ ಹೋದ ಕೆಲವೇ ದಿನಗಳಲ್ಲಿ ನನಗೆ ಜಗತ್ತಿನಲ್ಲಿ ಇರುವುದು ಎರಡೇ ವಿಚಾರ, ಅದು ಆತ್ಮ ಹಾಗೂ ಪರಮಾತ್ಮ ಎಂಬ ಸತ್ಯದ ಅರಿವಾಯಿತು. ಅಂದೇ ನಾನು ಜೀವನದಲ್ಲಿ ಈಶ್ವರೀಯ ವಿಶ್ವವಿದ್ಯಾಲಯದ ಸತ್ಯವನ್ನು ಮತ್ತಷ್ಟು ಅರ್ಥ ಮಾಡಿಕೊಂಡು ಪ್ರಚಾರ ಮಾಡಬೇಕು ಎಂದು ನಿರ್ಧರಿಸಿಕೊಂಡೆ.

ವಿದ್ಯಾಭ್ಯಾಸ ಮುಗಿಸಿ ಸರ್ಕಾರಿ ನೌಕರಿ ಮಾಡುತ್ತಾ 32 ವರ್ಷಗಳ ಕಾಲ ಪರಮಾತ್ಮನ ಬಗ್ಗೆ ತಿಳಿದೆ. ಇವರ ಭಾಷೆಯಲ್ಲಿಯೇ ಹೇಳಿದರೆ ಜನರಿಗೆ ಅರ್ಥವಾಗುವುದಿಲ್ಲ ಎಂದು ಅರಿತು ಭಗವದ್ಗೀತೆ ಅಧ್ಯಯನ ಮಾಡಿದೆ. ವಚನ ಸಾಹಿತ್ಯವನ್ನೂ ಅಭ್ಯಾಸ ಮಾಡಿದೆ. ಅಲ್ಲಿಯೂ ಪರಮಾತ್ಮನ ಸತ್ಯದ ಪರಿಚಾಯವಾಗಿ, ಪ್ರವಚನಗಳ ಮೂಲಕ ಸತ್ಯದ ಅರಿವು ಹಂಚಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ ಎಂದು ಡಾ. ಬಸವರಾಜ ರಾಜಋಷಿ ಹೇಳಿದರು.

## ರಾಷ್ಟ್ರಗೀತೆಯಲ್ಲೂ ಪರಮಾತ್ಮನ ಗುಣಗಾನ

ನಮ್ಮ ರಾಷ್ಟ್ರಗೀತೆಯೂ ಪರಮಾತ್ಮನನ್ನು ಧ್ಯಾನಿಸುವ, ಗುಣಗಾನ ಮಾಡುವ ಗೀತೆ ಎಂದು ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಪ್ರತಿಪಾದಿಸಿದರು.

ಜನಗಣಮನ ಅಧಿನಾಯಕ ಎಂದರೆ ಜನಗಳ, ಗಣಗಳ, ಮನಗಳ ಅಧಿನಾಯಕ ಪರಮಾತ್ಮನೇ ಎಂದರ್ಥ. ಮುಂದಿನ ಸಾಲುಗಳಲ್ಲಿ 'ಯಾವ ಪರ್ವತಗಳೇ ಇರಬಹುದು ಅವೆಲ್ಲಾ ಪರಮಾತ್ಮನ ಕಡೆ ತೋರಿಸುತ್ತವೆ ಎಂಬ ಭಾವನೆ ತುಂಬಿ ಬರೆಯಲಾಗಿದೆ.

'ತವ ಶುಭ ನಾಮೇ ಜಾಗೇ' ಎಂದರೆ ನಿನ್ನ ಶುಭ ನಾಮವನ್ನು ಸದಾ ಉದ್ಘೋಷಿಸುತ್ತಿದ್ದೇವೆ. ಅದರ ಆಶ್ರಯದಿಂದ ಬದುಕುತ್ತಿದ್ದೇವೆ. 'ಗಾಹೇ ತವ ಜಯಗಾಥ' ಎಂಬುದು ನಿನ್ನ ಗುಣಗಾನ ಸದಾಕಾಲ ಮಾಡುತ್ತೇವೆ ಎಂದರ್ಥ.

ಜನಗಳ, ಗಣಗಳಿಗೆ ಮಂಗಳವನ್ನುಂಟು ಮಾಡುವವನು ಎಂದರೆ ಮಂಗಳಕಾರಿ, ಕಲ್ಯಾಣಕಾರಿ, ಅವನೇ ಶಿವ ಎಂಬರ್ಥದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ರಾಷ್ಟ್ರಗೀತೆ ಕೊಟ್ಟಿದ್ದಾರೆ.

ಇದು ಯಾವುದೇ ವ್ಯಕ್ತಿಯನ್ನು ಓಲೈಸುವ ಗೀತೆಯಲ್ಲ. ರಾಷ್ಟ್ರಕ್ಕೆ ಕೊಟ್ಟ ಅಮೂಲ್ಯ ಗೀತೆ. ಪರಮಾತ್ಮನ ಧ್ಯಾನಿಸುವ, ಗುಣಗಾನ ಮಾಡುವ ಗೀತೆಯಾಗಿದೆ ಎಂದು ಹೇಳಿದರು.

## ಭಗವದ್ಗೀತೆಯ ಭಗವಂತ ಪರಮಾತ್ಮ

ಎಲ್ಲರೂ ಭಗವದ್ಗೀತೆಯ ಭಗವಂತ ಶ್ರೀ ಕೃಷ್ಣ ಎಂದು ತಿಳಿದಿದ್ದಾರೆ. ಆದರೆ, ಅರ್ಜುನನಗೆ ಕೃಷ್ಣನೇ 'ಈಶ್ವರ ಎಂಬ ಪರಮಾತ್ಮನನ್ನು ನೀನು ಧ್ಯಾನ ಮಾಡು' ಎಂದು ಹೇಳಿದ್ದಾನೆ.

ಜಗತ್ತಿಗೆ ಒಬ್ಬನೇ ಆದ ಪರಮಾತ್ಮನಿದ್ದಾನೆ. ಅವನು ಮೂರೂ ಲೋಕಕ್ಕೆ ಅಧಿಪತಿ. ಅವನನ್ನು ಧ್ಯಾನಿಸು, ಅವನಿಗೆ ಶರಣರಾಗು, ಅವನ ಅನುಗ್ರಹದಿಂದ ಶಾಂತಿ, ಮುಕ್ತಿ ಸಿಗುತ್ತದೆ ಎಂದು ಕೃಷ್ಣ ಹೇಳುತ್ತಾನೆ.

ಜೊತೆಗೆ ನಾನು ಪರಮಾತ್ಮನಲ್ಲ ಎಂದೂ ಸಹ ಪರೋಕ್ಷವಾಗಿ ಹೇಳಿದ್ದಾನೆ ಎಂದು ವಿಶ್ಲೇಷಿಸಿದರು.

## ಖಾಸಗಿ ಪ್ರಶಸ್ತಿಗೆ ಅನುಮತಿ ಕಡ್ಡಾಯ

**(1ನೇ ಪುಟದಿಂದ)** ಪಡೆಯಬೇಕಿದೆ. ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿ ಹಂತದವರು ಪ್ರಶಸ್ತಿ ಪಡೆಯ ಬೇಕಾದರೆ ಸಂಪುಟ ಕಾರ್ಯದರ್ಶಿಯಿಂದ ಅನುಮತಿ ಪಡೆಯಬೇಕಿದೆ. ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಪ್ರಶಸ್ತಿ ಪಡೆಯಲು ಅನುಮತಿ ನೀಡಬೇಕು. ಅಲ್ಲದೇ ಪ್ರಶಸ್ತಿ ನೀಡುವ ಖಾಸಗಿ ಸಂಸ್ಥೆಗಳ ನಂಬಿಕಾರ್ಹತೆ ನಿಷ್ಕಳಂಕಿತವಾಗಿ ರಬೇಕು ಎಂದೂ ತಿಳಿಸಲಾಗಿದೆ.

## ಮೈಸೂರು-ಬೆಂಗಳೂರು ರೈಲು

**(1ನೇ ಪುಟದಿಂದ)** ಕೈಗೊಂಡಿರುವುದರಿಂದ ಮೈಸೂರು ಮತ್ತು ತುಮಕೂರಿಗೆ ಸಬ್ ಅರ್ಬನ್ ರೈಲು ಸಂಚಾರದ ಅವಶ್ಯಕತೆ ಇಲ್ಲ ಎಂದು ಮಂಡಳಿ ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

## ಫೆ.15ರಿಂದ 10, 12ನೇ ತರಗತಿ ಪರೀಕ್ಷೆ

**(1ನೇ ಪುಟದಿಂದ)** ಹಾಗೂ ಜೆಇಇ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ವೇಳಾಪಟ್ಟಿ ರೂಪಿಸಲಾಗಿದೆ ಎಂದು ಪರೀಕ್ಷಾ ನಿಯಂತ್ರಕರಾದ ಸನ್ಯಂ ಭಾರದ್ವಜ್ ತಿಳಿಸಿದ್ದಾರೆ.

## ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿಂದು

ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಕಾರ್ತಿಕೋತ್ಸವ ಏರ್ಪಡಿಸಲಾಗಿದೆ. ಶ್ರೀ ಗುರು ಪಂಚಾಕ್ಷರಿ ಗವಾಯಿಗಳವರ ಅಂಧರ ಶಿಕ್ಷಣ ಸಮಿತಿ ಹಾಗೂ ಸಿಬ್ಬಂದಿ ವರ್ಗ, ಸರ್ವ ಸಮಾಜದ ಭಕ್ತರು ಆಗಮಿಸಬೇಕಾಗಿ ಸಮಿತಿಯ ಕಾರ್ಯದರ್ಶಿ ಕರಿಬಸಪ್ಪ ಕೋರಿದ್ದಾರೆ.

## ನಗರದಲ್ಲಿಂದು ಶಾಲಾ ವಾರ್ಷಿಕೋತ್ಸವ

ರಾಜನಹಳ್ಳಿ ವಿ. ಗೋಪಾಲಕೃಷ್ಣ ಶೆಟ್ಟಿ ಕಾಂತಲಕ್ಷ್ಮಮ್ಮ ಕನ್ನಡ ಮಾಧ್ಯಮ ಪ್ರೌಢಶಾಲೆಯ 30ನೇ ಶಾಲಾ ವಾರ್ಷಿಕೋತ್ಸವ ಸಮಾರಂಭವು ಇಂದು ಬೆಳಿಗ್ಗೆ 11.30 ಕ್ಕೆ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಅಧ್ಯಕ್ಷತೆಯನ್ನು ಆರ್.ಎಸ್. ನಾರಾಯಣಸ್ವಾಮಿ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ತ್ಯಾಗೀಶ್ವರಾನಂದರು, ಶೇರ್ ಅಲಿ, ಜಗನ್ನಾಥ ನಾಡಿಗೇರ ಆಗಮಿಸುವರು.

ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್
ಪ್ರವೇಶ ಪ್ರಕಟಣೆ
ಕೆಲವೇ ಸೀಟುಗಳು ಮಾತ್ರ
Hurry up
1) DMLT - ಲ್ಯಾಬೋರೇಟರಿ ಟೆಕ್ನಾಲಜಿ
2) DHI ಹೆಲ್ತ್ ಇನ್‌ಸ್ಪೆಕ್ಟರ್ 3) DOT ಆಪ್ತಾಲ್ಮಿಕ್ ಟೆಕ್ನಾಲಜಿ
4) DOT & AT ಆಪರೇಷನ್ ಥಿಯೇಟರ್ ಅನಸ್ತೇಶಿಯಾ ಟೆಕ್ನಾಲಜಿ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜು
2ನೇ ಮುಖ್ಯ ರಸ್ತೆ, 9ನೇ ಅಡ್ಡ ರಸ್ತೆ, ಲತಾ ನರ್ಸಿಂಗ್ ಹೋಂ ಹತ್ತಿರ, AVK ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-02.
ಮೊ : 70195 86789, 99020 55335, ಫೋ. : 08192 460622

ATTENTION
Here is an Opportunity to work as Life Planner
Benefits of become as Life Planner :
* Rewarding Career
* Attractive Remuneration
* Professional Training Reimbursement
* No Retirement Age
* Flexible Timing
* Unlimited Income
Category : Age 25+ & 10 Pass
* Retired Person * House Wife
* Self employed * Business Person
* Teachers * Bankers
* Mutual Fund Distributor
* Doctors * Engineer
Exclusive for running insurance Agents to take attractive Remuneration within 4 days
TATA AIA LIFE INSURANCE
Contact : 97393 10102


## ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)
ವಸೂಲಾತಿ ಅಧಿಕಾರಿಗಳು (ನಿ. 441)
ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಕ.ರಾ.ಸೌ.ಸಂ.ಸ.ನಿ., ಮಲ್ಲೇಶ್ವರಂ, ಬೆಂಗಳೂರು ಇವರ ನ್ಯಾಯಾಲಯದ ಆದೇಶದ ಮೇರೆಗೆ

### ಸ್ಥಿರಾಸ್ತಿ ಬಹಿರಂಗ ಹರಾಜು ನೋಟಿಸ್

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ **ಕರಾವಳಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ.,** # 2688/2. ಡಾ.ಶ್ಯಾಮಸುಂದರ್ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರೋಡ್, ದಾವಣಗೆರೆ-577006 ಇವರಿಂದ ಈ ಕೆಳಕಂಡ ಸುಸ್ತಿದಾರರ ಮೇಲೆ ಸಹಕಾರಿಯು ದಾವಾ ಕ್ರಮ ಜರುಗಿಸಿ, ಡಿಕ್ರಿ ಹುಕುಂ ಪಡೆದು, ಸದರಿ ಸಾಲದ ವಸೂಲಾತಿಗಾಗಿ ಸ್ಥಿರಾಸ್ತಿ ಸೊತ್ತನ್ನು ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ವೇಳೆಯಲ್ಲಿ ಬಹಿರಂಗ ಹರಾಜು ಮಾಡಲಾಗುತ್ತೆ. ಹರಾಜಿನಲ್ಲಿ ಸ್ಥಿರ ಸೊತ್ತನ್ನು ಕೊಳ್ಳಲು ಇಚ್ಛೆ ಉಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸೊತ್ತನ್ನು ಪಡೆಯಬಹುದು.

| ಕ್ರ. ಸಂ. | ಬಾಕಿದಾರರ ಹೆಸರು ಮತ್ತು ಇ.ಪಿ.ಸಂಖ್ಯೆ | ಬಾಕಿ ಮೊತ್ತ (ಅಸಲು+ಬಡ್ಡಿ) (30/11/2023 ರ ವರೆಗೆ) | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸ್ವತ್ತಿನ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಶ್ರೀ ಅನ್ಸರ್ ಅಹಮದ್ ಬಿನ್ ಮುಸ್ತಾಕ್ ಅಹಮದ್, ವಯಸ್ಸು : 48 ವರ್ಷ, #1129, 2 ಮೇನ್, 6ನೇ ಕ್ರಾಸ್ ಜಾಲಿನಗರ, ದಾವಣಗೆರೆ ಇಪಿ ಸಂಖ್ಯೆ : ಕ.ರಾ.ಸೌ.ಸಂ.ಸ.ನಿ/ಸ.ಸ.ನಿ/ ವಅ/1219/2021-22 | ರೂ.32,20,646 /- ಹಾಗೂ ಮುಂದಿನ ಬಡ್ಡಿ + ಇತರೆ ಖರ್ಚು. | ದಾವಣಗೆರೆ ನಗರ, 2ನೇ ಮೇನ್, 6ನೇ ಕ್ರಾಸ್, ಡೋರ್ ನಂ. 1129, ಜಾಲಿ ನಗರ, (ಸುರೇಶ್ ನಗರ), ಅಳತೆ: 20'X30' ಅಡಿ ವಿಸ್ತೀರ್ಣದ ವಾಸದ ಮನೆ ಇದಕ್ಕೆ ಗಡಿಗಳು ಚಕ್ಕುಬಂದಿ ಪೂರ್ವಕ್ಕೆ :- ಸೈಟ್ ನಂ.174 ಪಶ್ಚಿಮಕ್ಕೆ :- ಸೈಟ್ ನಂ.172 ಉತ್ತರಕ್ಕೆ :- ಖಲೀಲ್ ಸಾಹೇಬ್ ಅವರ ಸ್ವತ್ತು ದಕ್ಷಿಣಕ್ಕೆ :-ರೋಡ್ | ದಿನಾಂಕ: 14/12/2023 ನೇ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ. | ರೂ. 25000/- |

**ಸೂಚನೆ :- ಷರತ್ತುಗಳು ಅನ್ವಯಿಸುತ್ತದೆ.**

ಮಾರಾಟಾಧಿಕಾರಿಗಳು ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದೇ ಕಾರಣವನ್ನು ನೀಡದೇ ಮುಂದೂಡುವ ಇಲ್ಲವೇ ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.. ಹೆಚ್ಚಿನ ಮಾಹಿತಿಗಾಗಿ ಮಾರಾಟಾಧಿಕಾರಿಗಳನ್ನು ಅಥವಾ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

**ದೂರವಾಣಿ ಸಂಖ್ಯೆ : 08192-355740, 9844111334, 8147378885.**

ಸ್ಥಳ: ದಾವಣಗೆರೆ
ದಿನಾಂಕ : 12/12/2023

ಸಹಿ/- ಮಾರಾಟಾಧಿಕಾರಿ
ಕ.ಸೌ.ಪ.ಸ.ನಿ., ದಾವಣಗೆರೆ

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ನಿ., ದಾವಣಗೆರೆ

# ಕಚೇರಿಗಳ ಭದ್ರತೆಗೆ ಗೃಹ ರಕ್ಷಕರು



**ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್**

ದಾವಣಗೆರೆ, ಡಿ. 12 - ಜಿಲ್ಲಾ ಕಚೇರಿಗಳಲ್ಲಿ ಭದ್ರತೆಗಾಗಿ ಗೃಹ ರಕ್ಷಕರನ್ನು ನಿಯೋಜಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ನಗರದ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಗೃಹ ರಕ್ಷಕ ದಳದ ವತಿಯಿಂದ ಆಯೋಜಿಸಲಾಗಿದ್ದ ಅಖಿಲ ಭಾರತ ಗೃಹ ರಕ್ಷಕ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಪ್ರಸಕ್ತ ಖಾಸಗಿಯವರ ಮೂಲಕ ಗಾರ್ಡ್‌ಗಳನ್ನು ನೇಮಿಸಲಾಗುತ್ತಿದೆ. ಕೆಲ ಕಚೇರಿಗಳಿಗೆ ಭದ್ರತಾ ಸಿಬ್ಬಂದಿ ಇದ್ದರೆ, ಇನ್ನು ಕೆಲವು ಕಚೇರಿಗಳಿಗೆ ಭದ್ರತಾ ಸಿಬ್ಬಂದಿ ಇಲ್ಲ. ಅಗತ್ಯವಿರುವ ಎಲ್ಲ ಕಚೇರಿಗಳಿಗೆ ಗೃಹ ರಕ್ಷಕರನ್ನೇ ಭದ್ರತೆಗಾಗಿ ನೇಮಿಸಲಾಗುವುದು ಎಂದು ಹೇಳಿದರು.

ಹಬ್ಬಗಳಿಂದ ಹಿಡಿದು ಚುನಾವಣೆ ಯವರೆಗೆ ಎಲ್ಲ ಭದ್ರತಾ ಕಾರ್ಯಗಳಲ್ಲಿ ಗೃಹ ರಕ್ಷಕ ದಳ ತೊಡಗಿಕೊಂಡಿದೆ. ವಿಕೋಪದ ಸಂದರ್ಭದಲ್ಲೂ ನೆರವಾಗುತ್ತಿದೆ ಎಂದವರು ತಿಳಿಸಿದರು.

ಎಸ್ಪಿ ಉಮಾ ಪ್ರಶಾಂತ್ ಮಾತನಾಡಿ, ಪ್ರಸಕ್ತ ಪೊಲೀಸ್ ಠಾಣೆಗಳಿಗೆ 20 ಗೃಹ ರಕ್ಷಕರನ್ನು ನಿಯೋಜಿಸಲಾಗಿದೆ. ಇವರ ಸಂಖ್ಯೆಯನ್ನು 50ಕ್ಕೆ ಹೆಚ್ಚಿಸಲಾಗುವುದು ಎಂದು ಹೇಳಿದರು. ಸಂಚಾರ ವ್ಯವಸ್ಥೆ ಸೇರಿದಂತೆ ಹಲವು ವಿಭಾಗಗಳಲ್ಲಿ ಗೃಹ ರಕ್ಷಕ ದಳದವರು ಪೊಲೀಸರಷ್ಟೇ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಗೃಹ ರಕ್ಷಕ ದಳದ ಜಿಲ್ಲಾ ಸಮಾದೇಷ್ಠ ಸುಚಿತ್ ಕುಮಾರ್, ಗೃಹ ರಕ್ಷಕ ದಳದವರು ಇನ್ನಷ್ಟು ಕರ್ತವ್ಯ ನಿಷ್ಠೆ ಹಾಗೂ ಶಿಸ್ತಿನಿಂದ ಉನ್ನತವಾಗಿ ಬೆಳೆಯಬೇಕಿದೆ. ಗೃಹ ರಕ್ಷಕ ದಳಕ್ಕೆ ಇನ್ನಷ್ಟು ಮೌಲ್ಯ ತರಬೇಕಿದೆ ಎಂದರು.

ಈ ಸಂದರ್ಭದಲ್ಲಿ ನಿವೃತ್ತ ಗೃಹ ರಕ್ಷಕರು, 25 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿದವರು ಹಾಗೂ ಉತ್ತಮ ಕಾರ್ಯನಿರ್ವಹಣೆ ತೋರಿದವರಿಗೆ ಸನ್ಮಾನಿಸಲಾಯಿತು.

ದೇವರಬೆಳಕೆರೆಯ ಗೃಹ ರಕ್ಷಕ ತರಬೇತಿ ಕೇಂದ್ರದ ತರಬೇತುದಾರ ಕಿಶೋರ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮನ್ಸೂರ್ ಅಹಮದ್ ವರದಿ ವಾಚಿಸಿದರು. ನಿಜಗುಣ ಶಿವಯೋಗಿ ಪ್ರಾರ್ಥಿಸಿದರು. ಕೆ.ಎಸ್. ಅಮರೇಶ್ ಸ್ವಾಗತಿಸಿದರು. ಎಂ. ರಾಘವೇಂದ್ರ ವಂದಿಸಿದರು.

# ಪುಸ್ತಕಗಳು ಜ್ಞಾನ ದೀವಿಗೆಗಳು : ಡಿಡಿಪಿಐ ಕೊಟ್ರೇಶ್



ದಾವಣಗೆರೆ, ಡಿ. 12- ಪುಸ್ತಕಗಳು ಜ್ಞಾನ ದೀವಿಗೆಗಳು. ವಿದ್ಯಾರ್ಥಿಗಳಿಗೆ ದಾನಿಗಳಿಂದ ದೊರೆಯುತ್ತಿರುವ ಪುಸ್ತಕದ ಪ್ರಸಾದ ಇಡೀ ಜೀವಮಾನದುದ್ದಕ್ಕೂ ಪ್ರಸಾದವಾಗುತ್ತದೆ. ಭಾಷಾ ಸಂಪತ್ತು ಮತ್ತು ಶಬ್ದ ಸಂಪತ್ತು ಹೆಚ್ಚಾಗಲು ಮಕ್ಕಳು ಪಠ್ಯ ಪುಸ್ತಕಗಳೊಂದಿಗೆ ಇತರೆ ಸಾಮಾನ್ಯ ಜ್ಞಾನ, ವ್ಯಾಕರಣ, ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ಓದುವ ಅಭಿರುಚಿ ಬೆಳೆಸಿಕೊಳ್ಳಬೇಕೆಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಜಿ.ಕೊಟ್ರೇಶ್ ಕರೆ ನೀಡಿದರು.

ನಗರದ ಈಶ್ವರಮ್ಮ ಶಾಲಾ ಸಭಾಂಗಣದಲ್ಲಿ ಡಾ.ಹೆಚ್.ಎಫ್. ಕಟ್ಟಿಮನಿ ಪ್ರೌಢ ಶಿಕ್ಷಣ ಪ್ರತಿಷ್ಠಾನ ಹಾಗೂ ಈಶ್ವರಮ್ಮ ಶಾಲಾಡಳಿತ ಮಂಡಳಿ ಸಂಯುಕ್ತಾಶ್ರಯದಲ್ಲಿ ಇಂದು ಏರ್ಪಾಡಾಗಿದ್ದ ಪುಸ್ತಕ ವಾಚನ ಸಹಾಯ ಯೋಜನೆಯ 21 ಶಾಲೆಗಳ ಫಲಾನುಭವಿಗಳಿಗೆ ಪುಸ್ತಕ ವಿತರಣೆ 'ಪುಸ್ತಕ ಪಂಚಮಿ'ಯ 14 ನೇ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಡ ಮಕ್ಕಳಿಗೆ ಪುಸ್ತಕಗಳೆಂಬ ಪ್ರಸಾದ ನೀಡಿದರೆ ಅದು ಜೀವನ ಪರ್ಯಂತ ವರ ಪ್ರಸಾದವಾಗಲಿದೆ. ಅನ್ನ ಪ್ರಸಾದ ಕೇವಲ ಒಂದು ದಿನಕ್ಕೆ ಮುಗಿಯುತ್ತದೆ ಎಂದರು.

ಪುಸ್ತಕ ಪಂಚಮಿ ಕಾರ್ಯಕ್ರಮ ಮಕ್ಕಳಲ್ಲಿ ಓದುವ ಅಭಿರುಚಿಯನ್ನು ಬೆಳೆಸುತ್ತದೆ. ಜ್ಞಾನ ವೃದ್ಧಿಗೆ ಕೊಡುಗೆ ನೀಡುವಂತಹದ್ದಾಗಿದೆ. ವಿದ್ಯಾರ್ಜನೆಗೆ ಅವಕಾಶ ದೊರೆತಾಗ ಮಕ್ಕಳ ಉನ್ನತಿ ಆಗಲಿದೆ. ಇದರಿಂದ ವ್ಯಕ್ತಿಯಿಂದ ವ್ಯಕ್ತಿಗೆ ಜ್ಞಾನ ಪಸರಿಸಲಿದೆ ಎಂದು ಹೇಳಿದರು.

ಪೋಷಕರಾಗಲೀ, ಶಿಕ್ಷಕರಾಗಲೀ ಜಾಣ ಮತ್ತು ದಡ್ಡ ಎಂದು ವಿಂಗಡಿಸದಿರಿ. ಈ ರೀತಿ ಮಾಡುವುದರಿಂದ ಮಕ್ಕಳಲ್ಲಿ ಕೀಳರಿಮೆ ಬೆಳೆಯಲಿದೆ. ಮನೆಯಲ್ಲಿ ತಾಯಂದಿರು ತಮ್ಮ ಮಕ್ಕಳಿಗೋಸ್ಕರ ಕನಿಷ್ಠ ಪಕ್ಷ ಒಂದು ಗಂಟೆ ಕಾಲ ಮೊಬೈಲ್ ಸ್ವಿಚ್‌ಆಫ್ ಮಾಡಿ ಮಕ್ಕಳನ್ನು ಓದಿಸುವ ಪ್ರಯತ್ನ ಮಾಡಿದ್ದೇ ಆದರೆ ಅವರ ಭವಿಷ್ಯ ಉಜ್ವಲವಾಗುವುದರಲ್ಲಿ ಸಂಶಯವಿಲ್ಲ ಎಂದರು.

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ ಮಾತನಾಡಿ, ಇದೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿದ್ದು, ತಂದೆ-ತಾಯಿಗಳಿಗೂ ಅರಿವು ಮೂಡಲಿದೆ. ದಾವಣಗೆರೆಯಲ್ಲಿ ದಾನಿಗಳು, ಹೃದಯವಂತರಿದ್ದಾರೆ. ಅವರ ಸಲಹೆ - ಸಹಕಾರದೊಂದಿಗೆಮುನ್ನಡೆಯೋಣವೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಈಶ್ವರಮ್ಮ ಶಾಲಾಡಳಿತ ಮಂಡಳಿ ಕಾರ್ಯದರ್ಶಿ ಶ್ರೀಮತಿ ಎ.ಆರ್. ಉಷಾ ರಂಗನಾಥ್ ಮಾತನಾಡಿ, ಒಂದು ಉತ್ತಮ ಪುಸ್ತಕ ನೂರು ಜನ ಸ್ನೇಹಿತರಿಗಿಂತ ಶ್ರೇಷ್ಠ. ಮಹಾತ್ಮರ ಬದುಕಿನ ಸಂದೇಶಗಳನ್ನೊಳಗೊಂಡ ಉತ್ತಮ ಪುಸ್ತಕಗಳನ್ನು ಓದುವುದರಿಂದ ಸಕಾರಾತ್ಮಕ ಹಾಗೂ ಆತ್ಮವಿಶ್ವಾಸ ಬೆಳೆಯುತ್ತದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಕ್ಕಳ ತಜ್ಞ ಡಾ. ಸಿ.ಆರ್. ಬಾಣಾಪುರಮಠ ಅವರು, ಅನೇಕ ವಿದ್ಯಾಸಂಸ್ಥೆಗಳಿಗೆ ತಳಪಾಯ ಹಾಕಿದ ನಮ್ಮ ಅಜ್ಜ ಡಾ.ಹೆಚ್.ಎಫ್. ಕಟ್ಟಿಮನಿ ಅವರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಿದ್ದು, ದಾವಣಗೆರೆಯಲ್ಲಿ ಕಳೆದ 13 ವರ್ಷಗಳಿಂದ ಪುಸ್ತಕ ಪಂಚಮಿ ಕಾರ್ಯಕ್ರಮದ ಮೂಲಕ ಬಡ ವಿದ್ಯಾರ್ಥಿಗಳಿಗೆ ದಾನಿಗಳ ಪುಸ್ತಕಗಳನ್ನು ವಿತರಿಸಲಾಗುತ್ತಿದೆ ಎಂದರು.

ಈಶ್ವರಮ್ಮ ಶಾಲಾಡಳಿತ ಮಂಡಳಿ ಖಜಾಂಚಿ ಎ.ಪಿ. ಸುಜಾತ, ಪ್ರಾಂಶುಪಾಲರಾದ ಕೆ.ಎಸ್. ಪ್ರಭುಕುಮಾರ್, ಪ್ರತಿಷ್ಠಾನದ ಸಹ ಸಂಚಾಲಕ ಆರ್.ಸಿ ಪುರಾಣಿಕ್ ಮಠ ಮತ್ತಿತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಪ್ರಾರ್ಥಿಸಿದರು. ವಿಶ್ರಾಂತ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್ ಬೂಸ್ನೂರು ಸ್ವಾಗತಿಸಿದರು. ಶಿಕ್ಷಕಿ ಬಿ. ಶ್ರೀದೇವಿ ನಿರೂಪಿಸಿದರು.

## 18ರಂದು ದೇವರಹಟ್ಟಿ ಬಸವಣ್ಣ ಕಾರ್ತಿಕ



ದಾವಣ ಗೆರೆ, ಡಿ. 12- ತಾಲ್ಲೂಕಿನ ದೇವರಹಟ್ಟಿ ಗ್ರಾಮದ ಶ್ರೀ ದೇವರಹಟ್ಟಿ ಬಸವಣ್ಣನ ದೇವಸ್ಥಾನದಲ್ಲಿ ಇದೇ ದಿನಾಂಕ 18ರ ಸೋಮವಾರ ಕಾರ್ತಿಕೋತ್ಸವ ಏರ್ಪಡಿಸಲಾಗಿದ್ದು, ರಾತ್ರಿ 7 ಗಂಟೆಯಿಂದ ವಿಶೇಷ ಪೂಜೆ, ಮಹಾ ಮಂಗಳಾರತಿ, ಫಳಾರ ವಿನಿಯೋಗ ನಡೆಯಲಿದೆ.

## ನಗರದಲ್ಲಿ ಇಂದು ನೇರ ಸಂದರ್ಶನ

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಾದರಿ ವೃತ್ತಿ ಕೇಂದ್ರದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ (ಕೊಠಡಿ.ಸಂ.51)ದಲ್ಲಿ ನೇರ ಆಯ್ಕೆ ಸಂದರ್ಶನ ಆಯೋಜಿಸಲಾಗಿದೆ. ನೇರ ಆಯ್ಕೆ ಸಂದರ್ಶನದಲ್ಲಿ ಖಾಸಗಿ ಸಂಸ್ಥೆಗಳು ಭಾಗವಹಿಸುತ್ತಿದ್ದು, ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಎಂ.ಎಸ್ಸಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ. 7483808321, 08192-259446 ಸಂಪರ್ಕಿಸಲು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಉದ್ಯೋಗಾಧಿಕಾರಿ ರವೀಂದ್ರ. ಡಿ ತಿಳಿಸಿದ್ದಾರೆ.

## ಕನ್ನಡ ಭಾಷೆ, ಪರಂಪರೆ ಉಳಿವಿಗಾಗಿ ಶ್ರಮಿಸಬೇಕು



**ಕನ್ನಡಪರ ಹೋರಾಟಗಾರ ಬಸವರಾಜ ಐರಣಿ**

ದಾವಣಗೆರೆ, ಡಿ. 12- ಮಾತೃಭಾಷೆಗೆ ಪ್ರತಿಯೊಬ್ಬರೂ ಮಹತ್ವ ನೀಡುವ ಮೂಲಕ ಕನ್ನಡ ಭಾಷೆ, ಪರಂಪರೆ ಉಳಿವಿಗಾಗಿ ಶ್ರಮಿಸಬೇಕು ಎಂದು ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಾಗೂ ಕನ್ನಡಪರ ಹೋರಾಟಗಾರ ಬಸವರಾಜ ಐರಣಿ ಹೇಳಿದರು.

ನಗರದ ಎಸ್.ಓ.ಜಿ. ಕಾಲೋನಿಯಲ್ಲಿ ಮಂಗಳವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ನಾಡು-ನುಡಿಗೆ ಅನೇಕ ಮಹನೀಯರು ಹೋರಾಟ ಮಾಡಿದ್ದಾರೆ. ಅವರ ತ್ಯಾಗ ಅರಿತು ಭಾಷೆ, ನಾಡಿನ ಅಭಿವೃದ್ಧಿಗೆ ಹೆಚ್ಚು ಆಸಕ್ತಿ ವಹಿಸಬೇಕು. ಕನ್ನಡಕ್ಕೆ ಧಕ್ಕೆ ಬಂದಾಗ ನಾವೆಲ್ಲರೂ ಒಗ್ಗೂಡಿ ಪ್ರತಿಭಟಿಸುವಂತಹ ಮನೋಭಾವ ಕಾಣಬೇಕು. ಕನ್ನಡ ನಾಡು, ನುಡಿಗೆ ಬದ್ಧರಾಗಿ ಬದುಕೋಣ, ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕುಂಬಾರ ನಾಗಣ್ಣ, ಹೆಚ್. ತಿಮ್ಮಣ್ಣ, ಬಿ. ಕಲ್ಲೇಶಪ್ಪ, ದುರುಗೋಜಪ್ಪ, ಅಶೋಕ್, ಮೌನೇಶ್, ಎಂ. ಗುರುಮೂರ್ತಿ, ಪಾಂಡುರಂಗಪ್ಪ, ಅಡುಗೆ ಬಸಣ್ಣ, ಮಹಾಂತೇಶ್, ಬಾಲಪ್ಪ ಮತ್ತಿತರರು ಉಪಸ್ಥಿತರಿದ್ದರು.

# 34 ಸಾವಿರ ಕೋಟಿ ರೂ. ಹೂಡಿಕೆಗೆ ಒಪ್ಪಿಗೆ

ಬೆಳಗಾವಿ, ಡಿ. 13 – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿಯ ಸಭೆಯಲ್ಲಿ 34,115 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಯ 14 ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಯಿತು. ಇದರಿಂದ 13,308 ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ.

ಉನ್ನತ ಸಮಿತಿ ಒಪ್ಪಿಗೆ ನೀಡಿರುವ 14 ಪ್ರಸ್ತಾವನೆಗಳಲ್ಲಿ 10 ಹೊಸ ಯೋಜನೆಗಳು ಸೇರಿವೆ. ಇವುಗಳ ಹೂಡಿಕೆ 19,452 ಕೋಟಿ ರೂ. ಆಗಿದೆ. ನಾಲ್ಕು ಯೋಜನೆಗಳು ಹೆಚ್ಚುವರಿ ಹೂಡಿಕೆ ಪ್ರಸ್ತಾವನೆಗಳಾಗಿದ್ದು, ಇವುಗಳ ಮೊತ್ತ 14,662.59 ಕೋಟಿ ರೂ.

ಈ ಬಗ್ಗೆ ಮಾಹಿತಿ ನೀಡಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಫಾಕ್ಸ್‌ಕಾನ್‌ನ ಹೆಚ್ಚುವರಿ 13,911 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಮಾಡುವ ಪ್ರಸ್ತಾವನೆಗೆ ಸಮಿತಿ ಅನುಮೋದಿಸಿದೆ. ಫಾಕ್ಸ್‌ಕಾನ್ ಈಗಾಗಲೇ ರಾಜ್ಯದಲ್ಲಿ ರೂ. 8,000 ಕೋಟಿ ಬಂಡವಾಳ ಹೂಡಿಕೆ ಮಾಡಲು ಅನುಮೋದನೆ ಪಡೆದಿದೆ ಎಂದರು.

ಇದೇ ವೇಳೆ ಜೆಎಸ್‌ಡಬ್ಲ್ಯು ರಿನ್ಯೂ ಎನರ್ಜಿ ಫೋರ್ ಲಿಮಿಟೆಡ್ (4,960 ಕೋಟಿ ರೂ.), ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್ (3,804 ಕೋಟಿ ರೂ.), ಟೊಯೊಟಾ ಕಿರ್ಲೋಸ್ಕರ್ ಮೋಟರ್ ಪ್ರೈವೇಟ್ ಲಿಮಿಟೆಡ್ (3237.30 ಕೋಟಿ ರೂ.), ಟಿಆರ್‌ಐಎಲ್ ಬೆಂಗಳೂರು ರಿಯಲ್ ಎಸ್ಟೇಟ್ ಸಿಕ್ಸ್ ಲಿಮಿಟೆಡ್ (3273 ಕೋಟಿ ಹೂಡಿಕೆ ರೂ.), ಜಾನಕಿ ಕಾರ್ಪ್ ಲಿಮಿಟೆಡ್ (607 ಕೋಟಿ ರೂ. ಮೊತ್ತದ ಹೆಚ್ಚುವರಿ ಹೂಡಿಕೆ) ಪ್ರಸ್ತಾವನೆಗಳಿಗೆ ಒಪ್ಪಿಗೆ ನೀಡಲಾಗಿದೆ.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ 4 ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳಿಂದ ಒಟ್ಟು 9,461 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಆಗಲಿದೆ. ಇವುಗಳಿಂದ ಈ ಪ್ರದೇಶದಲ್ಲಿ 3,538 ಜನರಿಗೆ ಉದ್ಯೋಗ ಅವಕಾಶಗಳು ದೊರೆಯಲಿವೆ.

'ಬೆಂಗಳೂರಿನ ಆಚೆ' ಉಪಕ್ರಮದ ಅಂಗವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಸಚಿವರು ಹೇಳಿದರು.

## 58 ಸಾವಿರ ಕೋಟಿ ರೂ. ಹೆಚ್ಚುವರಿ ವೆಚ್ಚಕ್ಕೆ ಒಪ್ಪಿಗೆ

ನವದೆಹಲಿ, ಡಿ. 12 – ಪ್ರಸಕ್ತ ಹಣಕಾಸು ವರ್ಷದಲ್ಲಿ 58,378 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ವೆಚ್ಚ ಮಾಡಲು ಲೋಕಸಭೆ ಒಪ್ಪಿಗೆ ನೀಡಿದೆ. ಇದರಲ್ಲಿ ಹೆಚ್ಚಿನ ಪಾಲಿನ ಹಣ ಉದ್ಯೋಗ ಖಾತ್ರಿ ಹಾಗೂ ರಸಗೊಬ್ಬರ ಸಬ್ಸಿಡಿಗೆ ಪಾವತಿಯಾಗಲಿದೆ.

ಸರ್ಕಾರ ಈ ವರ್ಷ ಹೆಚ್ಚುವರಿಯಾಗಿ 1.29 ಲಕ್ಷ ಕೋಟಿ ರೂ. ವೆಚ್ಚ ಮಾಡಲಿದೆ. ಇದರಲ್ಲಿ 70,968 ಕೋಟಿ ರೂ.ಗಳನ್ನು ಉಳಿತಾಯ ಹಾಗೂ ಆದಾಯಗಳಿಂದ ಹೊಂದಿಸಲಾಗುವುದು.

ಪೂರಕ ಬೇಡಿಕೆಗಳ ಕುರಿತು ಚರ್ಚೆಯಲ್ಲಿ ಮಾತನಾಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಆರ್ಥಿಕ ಶಿಸ್ತು ಸರ್ಕಾರದ ಉನ್ನತ ಆದ್ಯತೆಯಾಗಿದೆ. ಸಾಮಾಜಿಕ ಕಲ್ಯಾಣದ ಜೊತೆ ಹೊಂದಾಣಿಕೆ ಮಾಡಿಕೊಳ್ಳದೇ ಶಿಸ್ತು ಪಾಲಿಸಲಾಗುವುದು ಎಂದರು.

## ನಿರುದ್ಯೋಗಿ ಯುವ ಜನರಿಗೆ ಸ್ವ-ಉದ್ಯೋಗದ ತರಬೇತಿ

ದಾವಣಗೆರೆ, ಡಿ. 12- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ರೇಷ್ಮೆ ಇಲಾಖೆ ಆವರಣ, ಹಳೆ ತೋಳಹುಣಸೆ ಹಾಗೂ ಜಿಲ್ಲಾ ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಟ್ಟದ ಪುರುಷ ಅಭ್ಯರ್ಥಿಗಳಿಗಾಗಿ ಇದೇ ದಿನಾಂಕ 27 ರಿಂದ ವಿದ್ಯುತ್ ಪಂಪ್‌ಸೆಟ್ ಮತ್ತು ಮೋಟಾರ್ ರವೈಂಡಿಂಗ್ ತರಬೇತಿ ಆರಂಭವಾಗಲಿದೆ. 19 ರಿಂದ 44 ವಯೋಮಿತಿಯ ದಾವಣಗೆರೆ ಜಿಲ್ಲೆಯ ಗ್ರಾಮೀಣ ಮಟ್ಟದ ಬಿಪಿಎಲ್ ಪುರುಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ನಿರುದ್ಯೋಗಿ ಅಭ್ಯರ್ಥಿಗಳು ದಾಖಲೆಗಳೊಂದಿಗೆ ಹೆಸರನ್ನು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : ನಿರ್ದೇಶಕರು, ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ತೋಳಹುಣಸೆ, ದಾವಣಗೆರೆ (7019980484, 9483386143, 9964111314, 9538395817, 9481977076).

## ಖೋ-ಖೋ ಪಂದ್ಯಾವಳಿಗೆ ಆಯ್ಕೆ



ದಾವಣಗೆರೆ, ಡಿ.12- ಮಹಾರಾಷ್ಟ್ರದ ನಾಸಿಕ್‌ನಲ್ಲಿ ನಡೆಯುವ ಯು-19 ರಾಷ್ಟ್ರ ಮಟ್ಟದ ಪದವಿ ಪೂರ್ವ ಕಾಲೇಜುಗಳ ಖೋ-ಖೋ ಪಂದ್ಯಾವಳಿಗೆ ನಗರದಲ್ಲಿರುವ ಕ್ರೀಡಾ ವಸತಿ ನಿಲಯದ 5 ಜನ ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ.

19 ವರ್ಷದೊಳಗಿನ ಬಾಲಕ, ಬಾಲಕಿಯರ ರಾಷ್ಟ್ರ ಮಟ್ಟದ ಪದವಿ ಪೂರ್ವ ಕಾಲೇಜುಗಳ ಖೋ-ಖೋ ಪಂದ್ಯಾವಳಿಯು ನಾಳೆ ದಿನಾಂಕ 13 ರಿಂದ 17ರ ವರೆಗೆ ನಡೆಯಲಿದ್ದು, ನಗರದ ಕ್ರೀಡಾ ವಸತಿ ನಿಲಯದ ಖೋ-ಖೋ ಕ್ರೀಡಾಪಟುಗಳಾದ ಹುಲುಗಪ್ಪ, ನಿಖಿಲ್, ಪಂಕಜ್, ಕರಿಬಸಪ್ಪ ಮತ್ತು ವೆಂಕಟೇಶ್ ಪಂದ್ಯಾವಳಿಯಲ್ಲಿ ಭಾಗವಹಿಸುವರು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಕೆ.ಆರ್.ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.



## ಪ್ರಗತಿ ಪರ ರೈತ ಹೆದ್ನೆ ಮುರುಗೇಶಪ್ಪ ಅವರಿಗೆ ಪ್ರಶಸ್ತಿ ಪ್ರದಾನ

ದಾವಣಗೆರೆ, ಡಿ. 12- ಐಸಿಎಆರ್ ಕೃಷಿ ಜಾಗರಣೆ ಹಾಗೂ ಮಹೀಂದ್ರ ಟ್ರಾಕ್ಟರ್ ಪ್ರಯೋಜಕತ್ವದಲ್ಲಿ ದೆಹಲಿಯಲ್ಲಿ ಮೊನ್ನೆ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಜಿಲ್ಲೆಯ ಪ್ರಗತಿ ಪರ ರೈತ ಹದ್ನೆ ಮುರುಗೇಶಪ್ಪ ಅವರು ನ್ಯಾಷನಲ್ ಮಿಲೇನಿಯರ್ ಫಾರ್ಮರ್ ಆಫ್ ಇಂಡಿಯಾ ಪ್ರಶಸ್ತಿ ಸ್ವೀಕರಿಸಿದರು.

ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಸಾಧ್ವಿ ನಿರಂಜನ ಜ್ಯೋತಿ, ಗುರಜರಾತ್ ರಾಜ್ಯಪಾಲರು ಹಾಗೂ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಪಾಲ್ಗೊಂಡಿದ್ದರು.

## ಪ್ಯಾರಾ ಪವರ್ ಲಿಫ್ಟಿಂಗ್ ಸ್ಪರ್ಧೆ ತೀರ್ಪುಗಾರರಾಗಿ ದಾದಾಪೀರ್



ದಾವಣಗೆರೆ, ಡಿ. 12 - ನವದೆಹಲಿಯಲ್ಲಿ ಇಂದಿನಿಂದ ಇದೇ ದಿನಾಂಕ 16 ರವರೆಗೆ ನಡೆಯಲಿರುವ ಖೇಲೋ ಇಂಡಿಯಾ ಯೂತ್ಸ್ ಗೇಮ್ಸ್ - 23ಕ್ಕೆ ಪ್ಯಾರಾ ಪವರ್ ಲಿಫ್ಟಿಂಗ್ ಸ್ಪರ್ಧೆಯ ತೀರ್ಪುಗಾರರಾಗಿ ನಗರದ ಏಕಲವ್ಯ ಪ್ರಶಸ್ತಿ ಪುರಸ್ಕೃತ ಅಂತರರಾಷ್ಟ್ರೀಯ ತೀರ್ಪುಗಾರ ಎಚ್. ದಾದಾಪೀರ್ ಆಯ್ಕೆಯಾಗಿದ್ದಾರೆ.


**ಐದನೇ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀ ಎ. ರಾಮನಾಥ್ (ಅಕ್ಕಿ ರಾಮಣ್ಣ)**

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.
ಸದಾ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,

ಧರ್ಮಪತ್ನಿ : ಶ್ರೀಮತಿ ಉಮಾದೇವಿ ಎ.ರಾಮನಾಥ್
ಮಕ್ಕಳಾದ : ಮಂಜುನಾಥ್ ಎ.ಆರ್.
ಶ್ರೀಮತಿ ಎ.ಆರ್.ಸಿಂಧು ಪ್ರಶಾಂತ್,
ಡಾ. ಮನುದೀಪ್ ಎ.ಆರ್. ಹಾಗೂ ಬಂಧು-ಮಿತ್ರರು.

Srishyla Education Trust ®
**G.M. INSTITUTE OF TECHNOLOGY**
GMIT Campus, P.B.Road, Davanagere.

**ಬೇಕಾಗಿದ್ದಾರೆ**

ಈ ಕೆಳಕಂಡ ಹುದ್ದೆಗಳಿಗೆ ನುರಿತ, ಸೂಕ್ತ ತರಬೇತಿ ಹೊಂದಿದ ಅನುಭವಿ ಅಭ್ಯರ್ಥಿಗಳು ಬೇಕಾಗಿದ್ದಾರೆ.

| | |
|---|---|
| Guest House Manager | Any Degree Min 3 year Experience in Hotel Management |
| Lab Instructor | Dip in CS/EC/CIVIL/ELECTRICAL |
| Front Office Executive | Any Degree with Excellent in Communication Skill |
| Graphic Desinger | Expertise in Coreldraw and Photoshop |
| ಎಲೆಕ್ಟ್ರಿಷಿಯನ್ | ಕನಿಷ್ಠ 2–3 ವರ್ಷಗಳ ಅನುಭವ ಇರುವ ಡಿಪ್ಲೋಮೊ ಅಥವಾ ಐಟಿಐ ಎಲೆಕ್ಟ್ರೀಕಲ್ ಸೈನ್ಸ್ ಅಭ್ಯರ್ಥಿಗಳು ಬೇಕಾಗಿದ್ದಾರೆ |
| ಪ್ಲಂಬರ್ | ಕನಿಷ್ಠ 3 ವರ್ಷಗಳ ಅನುಭವ ಇರುವ ಪ್ಲಂಬರ್‌ಗಳು ಬೇಕಾಗಿದ್ದಾರೆ |
| ಕಾರ್‌ಪೆಂಟರ್ | ಕನಿಷ್ಠ 3 ವರ್ಷಗಳ ಅನುಭವ ಇರುವ ಕಾರ್‌ಪೆಂಟರ್ ಬೇಕಾಗಿದ್ದಾರೆ |
| ಡ್ರೈವರ್‌ಗಳು Car/Bus Drivers | ಕನಿಷ್ಠ 5 ವರ್ಷಗಳ ಅನುಭವ ಇರುವ (LMV & HMV) ಲೈಸೆನ್ಸ್ ಹೊಂದಿರುವವರು ಬೇಕಾಗಿದ್ದಾರೆ |
| ಅಟೆಂಡರ್ (Office Boy) | SSLC/PUC |

Note: Age Limit not more than 40 Years
Send your Resume to career@gmit.ac.in
More Details Contact
M: 70223 00263, 84948 04444

